# ದಾವಣಗೆರೆ ವಿಶ್ವವಿದ್ಯಾನಿಲಯ

ವಿಶ್ವವಿದ್ಯಾನಿಲಯ ಕಾರ್ಯಾಲಯ, ಶಿವಗಂಗೋತ್ರಿ, ದಾವಣಗೆರೆ–577007

## <u>ಸಿಂಡಿಕೇಟ್ ಸಾಮಾನ್ಯ ಸಭೆಯ ನಡಾವಳಿಗಳು</u>

## ದಿನಾಂಕ:21.01.2025

# ದಾವಣಗೆರೆ ವಿಶ್ವವಿದ್ಯಾನಿಲಯ

ವಿಶ್ವವಿದ್ಯಾನಿಲಯ ಕಾರ್ಯಾಲಯ, ಶಿವಗಂಗೋತ್ರಿ, ದಾವಣಗೆರೆ-577007

ದೂರವಾಣಿ ಸಂಖ್ಯೆ: 08192-208029, ಫ್ಯಾಕ್ಸ್ ಸಂಖ್ಯೆ: 08192-208008


: ವಿದ್ಯಾದಾನೇನ ವರ್ಧತೆ, ವಿದ್ಯಾ ವಿನಯೇನ ಶೋಭತೆ, ವಿದ್ಯಯಾ ವಿಂಧತೆ ಅಮಅಮೃತಂ :

**ಸಂಖ್ಯೆ:ದಾವಿವಿ/ಪ್ರಾಧಿಕಾರ/ಸಿಂ/667/2024-25/** 3955 **ದಿನಾಂಕ:24.01.2025**

**ಇವರಿಗೆ,**

**ಮಾನ್ಯ ಸಿಂಡಿಕೇಟ್ ಸದಸ್ಯರುಗಳಿಗೆ.**

ಮಾನ್ಯರೆ,

**ವಿಷಯ : ದಿನಾಂಕ:21.01.2025 ರಂದು ಜರುಗಿದ ಸಿಂಡಿಕೇಟ್ ಸಾಮಾನ್ಯ ಸಭೆಯ ನಡಾವಳಿಗಳು.**

ಉಲ್ಲೇಖ : ಮಾನ್ಯ ಕುಲಪತಿಗಳ ಅನುಮೋದನೆ ದಿನಾಂಕ:24.01.2025

****

ವಿಶ್ವವಿದ್ಯಾನಿಲಯ ಪ್ರಾಧಿಕಾರಗಳ ನಿರ್ವಹಣೆ ಮತ್ತು ವ್ಯವಹಾರಗಳ ಅಧಿನಿಯಮಗಳು ಅಧ್ಯಾಯ - III ರ ಪ್ರಕರಣ 16 (i) ರ ರೀತ್ಯ ದಿನಾಂಕ:21.01.2025 ರಂದು ವಿಶ್ವವಿದ್ಯಾನಿಲಯದ ಆಡಳಿತ ಭವನದ ಸಿಂಡಿಕೇಟ್ ಸಭಾಂಗಣದಲ್ಲಿ ಜರುಗಿದ ಸಿಂಡಿಕೇಟ್ ಸಾಮಾನ್ಯ ಸಭೆಯ ನಡಾವಳಿಗಳನ್ನು ಈ ಮೂಲಕ ತಮಗೆ ಕಳುಹಿಸಲಾಗಿದೆ.

ಕರ್ನಾಟಕ ರಾಜ್ಯ ವಿಶ್ವವಿದ್ಯಾನಿಲಯಗಳ ಅಧಿನಿಯಮ, 2000 ರಡಿ ರಚಿಸಲಾಗಿರುವ ಪ್ರಾಧಿಕಾರಗಳ ನಿರ್ವಹಣೆ ಮತ್ತು ವ್ಯವಹಾರಗಳ ಅಧಿನಿಯಮಗಳು - ಅಧ್ಯಾಯ-III ರ ಪ್ರಕರಣ 16 (i) ರ ರೀತ್ಯ ನಡಾವಳಿ ತಲುಪಿದ **ಏಳು ದಿನಗಳೊಳಗಾಗಿ** ತಮ್ಮಿಂದ ನಡಾವಳಿಗಳ ದಾಖಲಾತಿಯ ಬಗ್ಗೆ ಯಾವುದೇ ಆಕ್ಷೇಪಣೆ ಬಾರದಿದ್ದಲ್ಲಿ ನಡಾವಳಿಗಳ ದಾಖಲಾತಿಯು ಸರಿಯಾಗಿದೆಯೆಂದು ಭಾವಿಸಲಾಗುವುದು.

ತಮ್ಮ ವಿಶ್ವಾಸಿ,

24/01/2025

ಕುಲಸಚಿವರು

ಕುಲಸಚಿವರು
ದಾವಣಗೆರೆ ವಿಶ್ವವಿದ್ಯಾನಿಲಯ
ಶಿವಗಂಗೋತ್ರಿ, ದಾವಣಗೆರೆ-577007

**ಪ್ರತಿಗಳು:**

1. ಮಾನ್ಯ ರಾಜ್ಯಪಾಲರ ಕಾರ್ಯದರ್ಶಿಗಳು, ಕರ್ನಾಟಕ ರಾಜ್ಯಪಾಲರ ಸಚಿವಾಲಯ, ರಾಜಭವನ, ಬೆಂಗಳೂರು-560 001.
2. ಸರ್ಕಾರದ ಮುಖ್ಯ ಕಾರ್ಯದರ್ಶಿಗಳು, ಕರ್ನಾಟಕ ಸರ್ಕಾರ, ವಿಧಾನಸೌಧ, ಬೆಂಗಳೂರು- 560 001.
3. ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು, ಉನ್ನತ ಶಿಕ್ಷಣ ಇಲಾಖೆ (ವಿಶ್ವವಿದ್ಯಾನಿಲಯಗಳು), ಬಹುಮಹಡಿಗಳ ಕಟ್ಟಡ, ಬೆಂಗಳೂರು
4. ಆಯುಕ್ತರು, ಕಾಲೇಜು ಶಿಕ್ಷಣ ಇಲಾಖೆ, ಕರ್ನಾಟಕ ಸರ್ಕಾರ, ನೃಪತುಂಗ ರಸ್ತೆ, ಬೆಂಗಳೂರು.
5. ಎಲ್ಲಾ ಸಿಂಡಿಕೇಟ್ ಸದಸ್ಯರುಗಳಿಗೆ, ದಾವಣಗೆರೆ ವಿಶ್ವವಿದ್ಯಾನಿಲಯ, ಶಿವಗಂಗೋತ್ರಿ, ದಾವಣಗೆರೆ.
6. ಕುಲಸಚಿವರು (ಪರೀಕ್ಷಾಂಗ), ದಾವಣಗೆರೆ ವಿಶ್ವವಿದ್ಯಾನಿಲಯ, ಶಿವಗಂಗೋತ್ರಿ, ದಾವಣಗೆರೆ.
7. ಹಣಕಾಸು ಅಧಿಕಾರಿಗಳು, ದಾವಣಗೆರೆ ವಿಶ್ವವಿದ್ಯಾನಿಲಯ, ಶಿವಗಂಗೋತ್ರಿ, ದಾವಣಗೆರೆ.
8. ನಿಕಾಯಗಳ ಡೀನರುಗಳು, ದಾವಣಗೆರೆ ವಿಶ್ವವಿದ್ಯಾನಿಲಯ, ಶಿವಗಂಗೋತ್ರಿ, ದಾವಣಗೆರೆ.
9. ಗ್ರಂಥಪಾಲಕರು, ದಾವಣಗೆರೆ ವಿಶ್ವವಿದ್ಯಾನಿಲಯ, ಶಿವಗಂಗೋತ್ರಿ, ದಾವಣಗೆರೆ.
10. ಕಾರ್ಯನಿರ್ವಾಹಕ ಇಂಜಿನಿಯರ್, ದಾವಣಗೆರೆ ವಿಶ್ವವಿದ್ಯಾನಿಲಯ, ಶಿವಗಂಗೋತ್ರಿ, ದಾವಣಗೆರೆ.
11. ಉಪಕುಲಸಚಿವರು, ಶೈಕ್ಷಣಿಕ/ಮಾಸನಿ/ಅಭಿವೃದ್ಧಿ ವಿಭಾಗ, ದಾವಣಗೆರೆ ವಿಶ್ವವಿದ್ಯಾನಿಲಯ, ಶಿವಗಂಗೋತ್ರಿ, ದಾವಣಗೆರೆ.
12. ನಿರ್ದೇಶಕರು, ಸಿ.ಡಿ.ಸಿ/ಐಕ್ಯೂಎಸಿ/ಪಿ.ಎಂ.ಇ./ದೈಹಿಕ ಶಿಕ್ಷಣ, ದಾವಣಗೆರೆ ವಿಶ್ವವಿದ್ಯಾನಿಲಯ, ಶಿವಗಂಗೋತ್ರಿ, ದಾವಣಗೆರೆ.
13. ಪ್ರಾಂಶುಪಾಲರು, ವಿಶ್ವವಿದ್ಯಾನಿಲಯ, ದೃಶ್ಯಕಲಾ ಕಾಲೇಜು, ದಾವಣಗೆರೆ-577004
14. ಸಂಯೋಜನಾಧಿಕಾರಿಗಳು, ವಿಶ್ವವಿದ್ಯಾನಿಲಯ ಸ್ನಾತಕೋತ್ತರ ಕೇಂದ್ರ, ರಾ.ಹೆ.13, ಗುಡ್ಡದ ರಂಗವ್ವನಹಳ್ಳಿ, ಚಿತ್ರದುರ್ಗ-577502
15. ಸಂಯೋಜನಾಧಿಕಾರಿಗಳು, ವಿಶ್ವವಿದ್ಯಾನಿಲಯದ ಸರ್ಕಾರಿ ಪ್ರಥಮ ದರ್ಜೆ ಘಟಕ ಕಾಲೇಜು, ತುರುವನೂರು, ಚಿತ್ರದುರ್ಗ-577517
16. ಸಂಯೋಜನಾಧಿಕಾರಿಗಳು, ವಿಶ್ವವಿದ್ಯಾನಿಲಯದ ಸರ್ಕಾರಿ ಪ್ರಥಮ ದರ್ಜೆ ಘಟಕ ಕಾಲೇಜು, ಹರಿಯಬ್ಬೆ, ಚಿತ್ರದುರ್ಗ-577546
17. ಆಪ್ತ ಕಾರ್ಯಾಲಯ, ಮಾನ್ಯ ಕುಲಪತಿಗಳು/ಕುಲಸಚಿವರು, ದಾವಣಗೆರೆ ವಿಶ್ವವಿದ್ಯಾನಿಲಯ, ಶಿವಗಂಗೋತ್ರಿ, ದಾವಣಗೆರೆ.
18. ಕಛೇರಿ ಪ್ರತಿ.

# ದಾವಣಗೆರೆ ವಿಶ್ವವಿದ್ಯಾನಿಲಯ

## ವಿಶ್ವವಿದ್ಯಾನಿಲಯದಲ್ಲಿ ದಿನಾಂಕ:21.01.2025 ರಂದು ಜರುಗಿದ ಸಿಂಡಿಕೇಟ್ ಸಾಮಾನ್ಯ ಸಭೆಯ ನಡಾವಳಿಗಳು

**ಸಭೆಯಲ್ಲಿ ಹಾಜರಿದ್ದ ಸದಸ್ಯರು:**

| | | |
|---|---|---|
| 1. | ಪ್ರೊ. ಬಿ.ಡಿ ಕುಂಬಾರ., ಮಾನ್ಯ ಕುಲಪತಿಗಳು | : ಅಧ್ಯಕ್ಷರು |
| 2. | ಶ್ರೀಮತಿ ಶಾರದಾ ಪಾಟೀಲ., ಮಾನ್ಯ ರಾಜ್ಯಪಾಲರಿಂದ ನಾಮನಿರ್ದೇಶಿತರು | : ಸದಸ್ಯರು |
| 3. | ಡಾ. ಉಮೇಶ್ ಬಿ. ಎನ್., ಮಾನ್ಯ ರಾಜ್ಯಪಾಲರಿಂದ ನಾಮನಿರ್ದೇಶಿತರು | : ಸದಸ್ಯರು |
| 4. | ಡಾ. ಕೆ.ಟಿ. ನಾಗರಾಜ ನಾಯ್ಕ., ಪ್ರಾಚಾರ್ಯರು | : ಸದಸ್ಯರು |
| 5. | ಶ್ರೀ ಬಾಬು ಕುಮಾರ್ ಓ., ಪ್ರಾಚಾರ್ಯರು | : ಸದಸ್ಯರು |
| 6. | ಡಾ. ಗಿರೀಶ್ ಟಿ., ಪ್ರಾಚಾರ್ಯರು | : ಸದಸ್ಯರು |
| 7. | ಶ್ರೀಮತಿ ಉಷಾ ಎಸ್., ಆರ್, ಪ್ರಾಚಾರ್ಯರು | : ಸದಸ್ಯರು |
| 8. | ಶ್ರೀ ದ್ಯಾಮಪ್ಪ., ಮಾನ್ಯ ರಾಜ್ಯ ಸರ್ಕಾರದಿಂದ ನಾಮನಿರ್ದೇಶಿತರು | : ಸದಸ್ಯರು |
| 9. | ಶ್ರೀ ತಿಪ್ಪೇಸ್ವಾಮಿ ಹೆಚ್., ಮಾನ್ಯ ರಾಜ್ಯ ಸರ್ಕಾರದಿಂದ ನಾಮನಿರ್ದೇಶಿತರು | : ಸದಸ್ಯರು |
| 10. | ಡಾ. ಜಿ. ಕೆ. ಪ್ರೇಮ., ಮಾನ್ಯ ರಾಜ್ಯ ಸರ್ಕಾರದಿಂದ ನಾಮನಿರ್ದೇಶಿತರು | : ಸದಸ್ಯರು |
| 11. | ಶ್ರೀ ಶಬೀರ್ ಅಲಿಖಾನ್., ಮಾನ್ಯ ರಾಜ್ಯ ಸರ್ಕಾರದಿಂದ ನಾಮನಿರ್ದೇಶಿತರು | : ಸದಸ್ಯರು |
| 12. | ಶ್ರೀ ಪ್ರಶಾಂತ್ ಆರ್. ಟಿ., ಮಾನ್ಯ ರಾಜ್ಯ ಸರ್ಕಾರದಿಂದ ನಾಮನಿರ್ದೇಶಿತರು | : ಸದಸ್ಯರು |
| 13. | ಡಾ. ಪ್ರಶಾಂತ ಎನ್. ಸಿ., ಮಾನ್ಯ ರಾಜ್ಯ ಸರ್ಕಾರದಿಂದ ನಾಮನಿರ್ದೇಶಿತರು | : ಸದಸ್ಯರು |
| 14. | ಡಾ. ಗೋವಿಂದಪ್ಪ ಎಂ., ಪ್ರಾಧ್ಯಾಪಕರು | : ಸದಸ್ಯರು |
| 15. | ಡಾ. ರಮೇಶ್ ಸಿ. ಕೆ., ಕುಲಸಚಿವರು (ಪರೀಕ್ಷಾಂಗ) | : ಸದಸ್ಯರು |
| 16. | ಡಾ. ಮಹಾಬಲೇಶ್ವರ ಯು.ಎಸ್., ಕುಲಸಚಿವರು, ಆಡಳಿತ (ಪ್ರಭಾರೆ) ಹಾಗೂ ಡೀನರು, ವಿಜ್ಞಾನ ನಿಕಾಯ, ದಾವಣಗೆರೆ ವಿಶ್ವವಿದ್ಯಾನಿಲಯ. | : ಸದಸ್ಯ ಕಾರ್ಯದರ್ಶಿ |

ನಿಯಮಾನುಸಾರ ಕನಿಷ್ಠ ಅಗತ್ಯ ಸಂಖ್ಯೆ 08 ಕ್ಕಿಂತ ಹೆಚ್ಚು ಅಂದರೆ 16 ಸದಸ್ಯರುಗಳು ಹಾಜರಿರುವುದನ್ನು ಖಚಿತಪಡಿಸಿಕೊಂಡು ನಿಗದಿತ ಸಮಯಕ್ಕೆ ಸರಿಯಾಗಿ ಸಭೆಯನ್ನು ಪ್ರಾರಂಭಿಸಲಾಯಿತು. ಮೊದಲನೆಯದಾಗಿ ಕುಲಸಚಿವರು ಮಾನ್ಯ ಕುಲಪತಿಗಳನ್ನು ಸಭೆಗೆ ಸ್ವಾಗತಿಸಿ ಅಧ್ಯಕ್ಷತೆಯನ್ನು ವಹಿಸುವಂತೆ ಕೋರಿದರು ಹಾಗೂ ಸಭೆಯಲ್ಲಿ ಹಾಜರಿದ್ದ ಎಲ್ಲಾ ಸದಸ್ಯರುಗಳಿಗೆ ಸ್ವಾಗತವನ್ನು ಕೋರಿದರು. ತದನಂತರ, ಸಭೆಯ ಕಲಾಪಗಳನ್ನು ಈ ಮುಂದಿನಂತೆ ಪ್ರಾರಂಭಿಸಲಾಯಿತು.

ಕುಲಸಚಿವರು ಕುಲಪತಿಗಳು

| ಪ್ರಾಧಿಕಾರಗಳ ವಿಭಾಗ – 1 | |
|---|---|
| ವಿಷಯ ಸಂಖ್ಯೆ: | ಸಿಂ.01(a)/(11/24) |

**–:ಟಿಪ್ಪಣಿ:–**

ವಿಷಯ: **ದಿನಾಂಕ:30.11.2024 ರಂದು ಏರ್ಪಡಿಸಲಾಗಿದ್ದ ಸಿಂಡಿಕೇಟ್ ಸಾಮಾನ್ಯ ಸಭಾ ನಡಾವಳಿಗಳ ದೃಢೀಕರಣ.**

*****

ದಿನಾಂಕ:30.11.2024 ರಂದು ಏರ್ಪಡಿಸಲಾಗಿದ್ದ ಸಿಂಡಿಕೇಟ್ ಸಾಮಾನ್ಯ ಸಭೆಯ ನಡಾವಳಿಗಳನ್ನು ದಿನಾಂಕ:04.12.2024 ರಂದು ವಿಶ್ವವಿದ್ಯಾನಿಲಯದ ಮಾನ್ಯ ಸಿಂಡಿಕೇಟ್ ಸದಸ್ಯರುಗಳಿಗೆ ಕಳುಹಿಸಲಾಗಿತ್ತು. ಸದರಿ ನಡಾವಳಿಗಳ ದೃಢೀಕರಿಸುವ ಸಂಬಂಧ ದಿನಾಂಕ:21.01.2025 ರಂದು ಏರ್ಪಡಿಸಿರುವ ಸಿಂಡಿಕೇಟ್ ಸಾಮಾನ್ಯ ಸಭೆಯ ದೃಢೀಕರಣಕ್ಕಾಗಿ ಸಲ್ಲಿಸಿದೆ.

:: ನಿರ್ಣಯ ::

ದಿನಾಂಕ:30.11.2024 ರಂದು ಏರ್ಪಡಿಸಲಾಗಿದ್ದ ಸಿಂಡಿಕೇಟ್ ಸಾಮಾನ್ಯ ಸಭೆಯ ನಡಾವಳಿಗಳ ಕುರಿತು ಕ್ರಮವಹಿಸಿರುವುದರ ಸಂಪೂರ್ಣ (Action Taken Report) ಮಾಹಿತಿಯನ್ನು ಸಭೆಯ ಗಮನಕ್ಕೆ ತರಲಾಯಿತು.

ಮುಂದುವರೆದು, ಸದರಿ ನಡಾವಳಿಗಳ ಕುರಿತು ಚರ್ಚಿಸಿ ನಡಾವಳಿಗಳನ್ನು ಸಭೆಯು ಒಮ್ಮತದಿಂದ ಅನುಮೋದಿಸಿತು.

ಕುಲಸಚಿವರು ಕುಲಪತಿಗಳು

| ಪ್ರಾಧಿಕಾರಗಳ ವಿಭಾಗ – 2 | |
|---|---|
| ವಿಷಯ ಸಂಖ್ಯೆ: | ಸಿಂ.01(b)/(01/25) |

## –: ಟಿಪ್ಪಣಿ :–

**ವಿಷಯ: ಬಾಬು ಜಗಜೀವನ್ ರಾಮ್ ಅಧ್ಯಯನ ಕೇಂದ್ರದ ಕರಡು ಪರಿನಿಯಮಗಳನ್ನು ಅನುಮೋದಿಸುವ ಕುರಿತು.**

*********

ವಿಶ್ವವಿದ್ಯಾನಿಲಯದ ಬಾಬು ಜಗಜೀವನ್ ರಾಮ್ ಅಧ್ಯಯನ ಕೇಂದ್ರಕ್ಕೆ ಸಂಬಂಧಿಸಿದ Draft Statutes Governing the Institution of Dr. Babu Jagjivan Ram Centre for Research and Extension Activities in Davangere University – ಕರಡು ಪರಿನಿಯಮಗಳನ್ನು ಸಿದ್ಧಪಡಿಸಿ ಸರ್ಕಾರದ ಮೂಲಕ ಮಾನ್ಯ ಗೌರವಾನ್ವಿತ ರಾಜ್ಯಪಾಲರ ಅನುಮೋದನೆಗಾಗಿ ಸಲ್ಲಿಸಬೇಕಾಗಿರುವುದರಿಂದ **ದಿನಾಂಕ:04.01.2025 ರ ವಿದ್ಯಾವಿಷಯಕ ಪರಿಷತ್ ಸಭೆಯಲ್ಲಿ ಮಂಡಿಸಿ ಅನುಮೋದನೆ ಪಡೆಯಲಾಗಿದೆ.** ಈ ಕುರಿತು ದಿನಾಂಕ:21.01.2025 ರಂದು ಏರ್ಪಡಿಸಲಾಗಿರುವ ಸಿಂಡಿಕೇಟ್ ಸಾಮಾನ್ಯ ಸಭೆಯ ಅವಗಾಹನೆಗೆ ಹಾಗೂ ಅನುಮೋದನೆಗೆ ಮಂಡಿಸಿದೆ.

### :: ನಿರ್ಣಯ ::

ಬಾಬು ಜಗಜೀವನ್ ರಾಮ್ ಅಧ್ಯಯನ ಕೇಂದ್ರಕ್ಕೆ ಸಂಬಂಧಿಸಿದ – Draft Statutes Governing the Institution of Dr. Babu Jagjivan Ram Centre for Research and Extension Activities in Davangere University – ಕರಡು ಪರಿನಿಯಮಗಳನ್ನು ಸರ್ಕಾರದ ಮೂಲಕ ಮಾನ್ಯ ಗೌರವಾನ್ವಿತ ರಾಜ್ಯಪಾಲರ ಅನುಮೋದನೆಗಾಗಿ ಸಲ್ಲಿಸಲು ಸಭೆಯು ಒಮ್ಮತದಿಂದ ಅನುಮೋದಿಸಿತು.

ಕುಲಸಚಿವರು

ಕುಲಪತಿಗಳು

| ಪ್ರಾಧಿಕಾರಗಳ ವಿಭಾಗ – 3 | |
|---|---|
| ವಿಷಯ ಸಂಖ್ಯೆ: | ಸಿಂ.01(c)/(01/25) |

## –: ಟಿಪ್ಪಣಿ :–

**ವಿಷಯಃ ವಿಶ್ವವಿದ್ಯಾನಿಲಯದ ಸ್ನಾತಕ ಹಾಗೂ ಸ್ನಾತಕೋತ್ತರ ಪದವಿಗಳನ್ನು ಮತ್ತು ಗೌರವ ಡಾಕ್ಟರೇಟ್ ಪದವಿಗಳನ್ನು ಹಿಂಪಡೆಯುವುದಕ್ಕೆ ಸಂಬಂಧಿಸಿದ ಪರಿನಿಯಮಗಳಿಗೆ ಅನುಮೋದನೆ ನೀಡುವ ಕುರಿತು**

*********

ವಿಶ್ವವಿದ್ಯಾನಿಲಯದ ಸ್ನಾತಕ ಹಾಗೂ ಸ್ನಾತಕೋತ್ತರ ಪದವಿಗಳನ್ನು ಮತ್ತು ಗೌರವ ಡಾಕ್ಟರೇಟ್ ಪದವಿಗಳನ್ನು ಹಿಂಪಡೆಯುವುದಕ್ಕೆ ಸಂಬಂಧಿಸಿದ – Draft Statutes Governing the Withdrawal of Academic Degrees/ Diplomas/ Honoris Causa Degrees Conferred by Davangere University – ಕರಡು ಪರಿನಿಯಮಗಳನ್ನು ಸಿದ್ಧಪಡಿಸಿ ಸರ್ಕಾರದ ಮೂಲಕ ಮಾನ್ಯ ಗೌರವಾನ್ವಿತ ರಾಜ್ಯಪಾಲರ ಅನುಮೋದನೆಗಾಗಿ ಸಲ್ಲಿಸಬೇಕಾಗಿರುವುದರಿಂದ **ದಿನಾಂಕ:04.01.2025 ರ ವಿದ್ಯಾವಿಷಯಕ ಪರಿಷತ್ ಸಭೆಯಲ್ಲಿ ಮಂಡಿಸಿ ಅನುಮೋದನೆ ಪಡೆಯಲಾಗಿದೆ.** ಈ ಕುರಿತು ದಿನಾಂಕ:21.01.2025 ರಂದು ಏರ್ಪಡಿಸಲಾಗಿರುವ ಸಿಂಡಿಕೇಟ್ ಸಾಮಾನ್ಯ ಸಭೆಯ ಅವಗಾಹನೆಗೆ ಹಾಗೂ ಅನುಮೋದನೆಗೆ ಮಂಡಿಸಿದೆ.

### :: ನಿರ್ಣಯ ::

ವಿಶ್ವವಿದ್ಯಾನಿಲಯದ ಸ್ನಾತಕ ಹಾಗೂ ಸ್ನಾತಕೋತ್ತರ ಪದವಿಗಳನ್ನು ಮತ್ತು ಗೌರವ ಡಾಕ್ಟರೇಟ್ ಪದವಿಗಳನ್ನು ಹಿಂಪಡೆಯುವುದಕ್ಕೆ ಸಂಬಂಧಿಸಿದ – Draft Statutes Governing the Withdrawal of Academic Degrees/ Diplomas/ Honoris Causa Degrees Conferred by Davangere University – ಕರಡು ಪರಿನಿಯಮಗಳನ್ನು ಸರ್ಕಾರದ ಮೂಲಕ ಮಾನ್ಯ ಗೌರವಾನ್ವಿತ ರಾಜ್ಯಪಾಲರ ಅನುಮೋದನೆಗಾಗಿ ಸಲ್ಲಿಸಲು ಸಭೆಯು ಒಮ್ಮತದಿಂದ ಅನುಮೋದಿಸಿತು.

ಕುಲಸಚಿವರು

ಕುಲಪತಿಗಳು

| ಪ್ರಾಧಿಕಾರಗಳ ವಿಭಾಗ – 4 | |
|---|---|
| ವಿಷಯ ಸಂಖ್ಯೆ: | ಸಿಂ.01(d)/(01/25) |

## –ಃ ಟಿಪ್ಪಣಿ ಃ–

**ವಿಷಯಃ ಗೌರವ ಪದವಿಗಳು ಹಾಗೂ ಶೈಕ್ಷಣಿಕ ಪದವಿಗಳನ್ನು ನೀಡುವುದಕ್ಕೆ ಸಂಬಂಧಿಸಿದ ಪರಿನಿಯಮಗಳಿಗೆ ಅನುಮೋದನೆ ನೀಡುವ ಕುರಿತು.**

*********

ವಿಶ್ವವಿದ್ಯಾನಿಲಯದ ಗೌರವ ಪದವಿಗಳು ಹಾಗೂ ಶೈಕ್ಷಣಿಕ ಪದವಿಗಳನ್ನು ನೀಡುವುದಕ್ಕೆ ಸಂಬಂಧಿಸಿದ – Draft Statutes Governing the Conferment of Honoris causa (Honorary Degrees) Degrees and Academic Degrees in Davangere University – ಕರಡು ಪರಿನಿಯಮಗಳನ್ನು ಸಿದ್ಧಪಡಿಸಿ ಸರ್ಕಾರದ ಮೂಲಕ ಮಾನ್ಯ ಗೌರವಾನ್ವಿತ ರಾಜ್ಯಪಾಲರ ಅನುಮೋದನೆಗಾಗಿ ಸಲ್ಲಿಸಬೇಕಾಗಿರುವುದರಿಂದ **ದಿನಾಂಕ:04.01.2025 ರ ವಿದ್ಯಾವಿಷಯಕ ಪರಿಷತ್ ಸಭೆಯಲ್ಲಿ ಮಂಡಿಸಿ ಅನುಮೋದನೆ ಪಡೆಯಲಾಗಿದೆ.** ಈ ಕುರಿತು ದಿನಾಂಕ:21.01.2025 ರಂದು ಏರ್ಪಡಿಸಲಾಗಿರುವ ಸಿಂಡಿಕೇಟ್ ಸಾಮಾನ್ಯ ಸಭೆಯ ಅವಗಾಹನೆಗೆ ಹಾಗೂ ಅನುಮೋದನೆಗೆ ಮಂಡಿಸಿದೆ.

### :: ನಿರ್ಣಯ ::

ವಿಶ್ವವಿದ್ಯಾನಿಲಯದ ಗೌರವ ಪದವಿಗಳು ಹಾಗೂ ಶೈಕ್ಷಣಿಕ ಪದವಿಗಳನ್ನು ನೀಡುವುದಕ್ಕೆ ಸಂಬಂಧಿಸಿದ – Draft Statutes Governing the Conferment of Honoris causa (Honorary Degrees) Degrees and Academic Degrees in Davangere University – ಕರಡು ಪರಿನಿಯಮಗಳನ್ನು ಸರ್ಕಾರದ ಮೂಲಕ ಮಾನ್ಯ ಗೌರವಾನ್ವಿತ ರಾಜ್ಯಪಾಲರ ಅನುಮೋದನೆಗಾಗಿ ಸಲ್ಲಿಸಲು ಸಭೆಯು ಒಮ್ಮತದಿಂದ ಅನುಮೋದಿಸಿತು.

ಕುಲಸಚಿವರು

ಕುಲಪತಿಗಳು

| ಇಂಜಿನಿಯರಿಂಗ್ ವಿಭಾಗ – 5 | |
|---|---|
| ವಿಷಯ ಸಂಖ್ಯೆ: | ಸಿಂ.02(a)/(01/25) |

## –: ಟಿಪ್ಪಣಿ :–

ವಿಷಯ: ಚಿತ್ರದುರ್ಗ ತಾಲೂಕು ತುರುವನೂರು ಹೋಬಳಿಯ ತುರುವನೂರು ಗ್ರಾಮದ ಸರ್ವೆ ನಂ: 685/3 ಮತ್ತು 686/5 & 3 ರಲ್ಲಿ ಒಟ್ಟು 2.04 ಎಕರೆ ಜಮೀನನ್ನು ವಿಶ್ವವಿದ್ಯಾನಿಲಯದ ಘಟಕ ಕಾಲೇಜು ಇಲ್ಲಿಗೆ ಹೆಚ್ಚುವರಿಯಾಗಿ ಭೂ–ಸ್ವಾಧೀನ ಪಡಿಸಿಕೊಳ್ಳುವ ಬಗ್ಗೆ.

ಉಲ್ಲೇಖ: ಸರ್ಕಾರದ ಕಂದಾಯ ಇಲಾಖೆ, ಉಪವಿಭಾಗಾಧಿಕಾರಿಗಳ ಕಾರ್ಯಾಲಯ, ಚಿತ್ರದುರ್ಗ ಉಪವಿಭಾಗ, ಚಿತ್ರದುರ್ಗ ಇವರ ಪತ್ರ ಸಂಖ್ಯೆ: ಎಲ್.ಎಕ್ಯೂ/ಸಿಆರ್:03:2020–21, ದಿನಾಂಕ:16.12.2024.

*********

ವಿಶ್ವವಿದ್ಯಾನಿಲಯದ ಘಟಕ ಕಾಲೇಜು, ತುರುವನೂರು ಇಲ್ಲಿಗೆ ಸಂಬಂಧಿಸಿದಂತೆ (ಉಲ್ಲೇಖ–1) ರಲ್ಲಿ ಉಪವಿಭಾಗಾಧಿಕಾರಿಗಳು, ಚಿತ್ರದುರ್ಗ ಉಪವಿಭಾಗ, ಚಿತ್ರದುರ್ಗ – ಇವರು ತಮ್ಮ ಪತ್ರ ದಿನಾಂಕ:16.12.2024ರಲ್ಲಿ ರೂ. 25,20,000/– (ರೂಪಾಯಿ ಇಪ್ಪತ್ತೈದು ಲಕ್ಷದ ಇಪ್ಪತ್ತು ಸಾವಿರ ಮಾತ್ರ) ಗಳನ್ನು ಐ.ಡಿ.ಬಿ.ಐ ಬ್ಯಾಂಕ್, ಚಿತ್ರದುರ್ಗ ಇಲ್ಲಿನ ಉಳಿತಾಯ ಖಾತೆ ಸಂಖ್ಯೆ:1241104000075758ಗೆ ಜಮಾ ಮಾಡಲು ತಿಳಿಸಿರುತ್ತಾರೆ.

ಮುಂದುವರೆದು, ಮುಂಬರುವ ಫೆಬ್ರವರಿ 2025ರ ಮೊದಲ ಅಥವಾ ಎರಡನೇ ವಾರದಲ್ಲಿ ಗೌರವಾನ್ವಿತ ಮಾನ್ಯ ಮುಖ್ಯ ಮಂತ್ರಿಗಳು ಚಿತ್ರದುರ್ಗ ಜಿಲ್ಲೆಗೆ ಭೇಟಿ ನೀಡಲಿದ್ದು, ಈ ಸುಸಂದರ್ಭದಲ್ಲಿ ವಿಶ್ವವಿದ್ಯಾನಿಲಯದ ಸದರಿ ಘಟಕ ಕಾಲೇಜಿನ ಕಟ್ಟಡವನ್ನು ಮಾನ್ಯ ಮುಖ್ಯಮಂತ್ರಿಗಳು ಉದ್ಘಾಟಿಸಲಿದ್ದಾರೆ. ಆದ್ದರಿಂದ, ಸದರಿ ಘಟಕ ಕಾಲೇಜಿನ ಮುಂಭಾಗದಲ್ಲಿರುವ 2.04 ಎಕರೆ ಜಮೀನನ್ನು ಸ್ವಾಧೀನ ಪಡಿಸಿಕೊಳ್ಳುವ ಹಿನ್ನೆಲೆಯಲ್ಲಿ – ತುರ್ತಾಗಿ ಮೇಲೆ ತಿಳಿಸಿದ ಮೊತ್ತವನ್ನು ವಿಶ್ವವಿದ್ಯಾನಿಲಯದಿಂದ ಪಾವತಿಸಲು ದಿನಾಂಕ:21.01.2025 ರಂದು ಏರ್ಪಡಿಸಲಾಗಿರುವ ಸಿಂಡಿಕೇಟ್ ಸಾಮಾನ್ಯ ಸಭೆಯ ಅವಗಾಹನೆಗೆ ಹಾಗೂ ಅನುಮೋದನೆಗೆ ಮಂಡಿಸಿದೆ.

### :: ನಿರ್ಣಯ ::

ಚಿತ್ರದುರ್ಗ ತಾಲೂಕು, ತುರುವನೂರು ಹೋಬಳಿಯ ತುರುವನೂರು ಗ್ರಾಮದ ಸರ್ವೆ ನಂ: 685/3 ಮತ್ತು 686/5 & 3 ರಲ್ಲಿ ಒಟ್ಟು 2.04 ಎಕರೆ ಜಮೀನನ್ನು ವಿಶ್ವವಿದ್ಯಾನಿಲಯದ ಘಟಕ ಕಾಲೇಜು ಇಲ್ಲಿಗೆ ಹೆಚ್ಚುವರಿಯಾಗಿ ಭೂ–ಸ್ವಾಧೀನಪಡಿಸಿಕೊಳ್ಳಲು – ಉಪವಿಭಾಗಾಧಿಕಾರಿಗಳು, ಚಿತ್ರದುರ್ಗ ಉಪವಿಭಾಗ, ಚಿತ್ರದುರ್ಗ – ಇವರಿಗೆ ರೂ.25,20,000/– ಗಳನ್ನು ಐ.ಡಿ.ಬಿ.ಐ ಬ್ಯಾಂಕ್, ಚಿತ್ರದುರ್ಗ ಇಲ್ಲಿನ ಉಳಿತಾಯ ಖಾತೆ ಸಂಖ್ಯೆ:1241104000075758ಗೆ ಜಮಾ ಮಾಡಲು ಸಭೆಯು ಘಟನೋತ್ತರವಾಗಿ ಒಮ್ಮತದಿಂದ ಅನುಮೋದಿಸಿತು.

ಕುಲಸಚಿವರು

ಕುಲಪತಿಗಳು

| ಇಂಜಿನಿಯರಿಂಗ್ ವಿಭಾಗ – 6 | |
|---|---|
| ವಿಷಯ ಸಂಖ್ಯೆ: | ಸಿಂ.02(b)-(01/25) |

## –ಃ ಟಿಪ್ಪಣಿ ಃ–

**ವಿಷಯಃ ದಾವಣಗೆರೆ ವಿಶ್ವವಿದ್ಯಾನಿಲಯ ವ್ಯಾಪ್ತಿಗೆ ಬರುವ ದೃಶ್ಯಕಲಾ ಮಹಾವಿದ್ಯಾಲಯದ ಆವರಣದಲ್ಲಿರುವ ಬಾಲಕರ ವಿದ್ಯಾರ್ಥಿ ನಿಲಯದ ಪೂರ್ಣಗೊಳಿಸಲು KRIDL, Davangere. ಇವರಿಗೆ ಅನುದಾನ ಬಿಡುಗಡೆ ಮಾಡುವ ಕುರಿತು.**

*********

ದಾವಣಗೆರೆ ವಿಶ್ವವಿದ್ಯಾನಿಲಯ ವ್ಯಾಪ್ತಿಗೆ ಬರುವ ದೃಶ್ಯಕಲಾ ಮಹಾವಿದ್ಯಾಲಯದ ಬಾಲಕರ ವಿದ್ಯಾರ್ಥಿ ನಿಲಯದ ಒಟ್ಟು ಅಂದಾಜು ಮೊತ್ತ ರೂ.199.00 ಲಕ್ಷ ಕಾಮಗಾರಿಗೆ ರೂ.196.01 ಲಕ್ಷಗಳಷ್ಟು ಅನುದಾನವನ್ನು ವಿಶ್ವವಿದ್ಯಾನಿಲಯದಿಂದ ದಾವಣಗೆರೆ ಇವರಿಗೆ ಬಿಡುಗಡೆ ಮಾಡಲಾಗಿರುತ್ತದೆ. ಬಿಡುಗಡೆಯಾದ ಈ ಅನುದಾನದಲ್ಲಿ ವಿಶ್ವವಿದ್ಯಾನಿಲಯದಿಂದ ಬಿಡುಗಡೆಯಾಗಬೇಕಾದ ಬಾಕಿ ಮೊತ್ತ ರೂ.94.125 ಲಕ್ಷಗಳ ಕಾಮಗಾರಿಗಳಿಗೆ ಪೂರ್ಣಗೊಳಿಸಲು ವೆಚ್ಚ ಮಾಡಲಾಗಿದ್ದು ದೃಶ್ಯಕಲಾ ಮಹಾವಿದ್ಯಾಲಯದ ಬಾಲಕರ ವಸತಿ ನಿಲಯ ಪೂರ್ಣಗೊಳಿಸಲು ರೂ.25.00ಲಕ್ಷಗಳಿಗೆ ಕಾರ್ಯಪಾಲಕ ಅಭಿಯಂತರರು KRIDL, ದಾವಣಗೆರೆ ಇವರು ಬೇಡಿಕೆಯಿಟ್ಟಿರುತ್ತಾರೆ. ಆದ್ದರಿಂದ, ಸದರಿ ವಿಷಯದ ಕುರಿತು ಚರ್ಚಿಸಿ ನಿರ್ಣಯಿಸಲು ದಿನಾಂಕ:21.01.2025 ರಂದು ಏರ್ಪಡಿಸಲಾಗಿರುವ ಸಿಂಡಿಕೇಟ್ ಸಾಮಾನ್ಯ ಸಭೆಯ ಅವಗಾಹನೆಗೆ ಹಾಗೂ ಅನುಮೋದನೆಗಾಗಿ ಮಂಡಿಸಿದೆ.

### :: ನಿರ್ಣಯ ::

ದಾವಣಗೆರೆ ವಿಶ್ವವಿದ್ಯಾನಿಲಯದ ದೃಶ್ಯಕಲಾ ಮಹಾವಿದ್ಯಾಲಯದ ಬಾಲಕರ ವಿದ್ಯಾರ್ಥಿ ನಿಲಯದ ಕಾಮಗಾರಿಯನ್ನು ಪೂರ್ಣಗೊಳಿಸಲು ರೂ.25.00 ಲಕ್ಷಗಳನ್ನು – ಕಾರ್ಯಪಾಲಕ ಅಭಿಯಂತರರು, KRIDL, ದಾವಣಗೆರೆ – ಇವರಿಗೆ ಪಾವತಿಸಲು ಸಭೆಯು ಒಮ್ಮತದಿಂದ ನಿರ್ಣಯಿಸಿತು.

ಕುಲಸಚಿವರು | ಕುಲಪತಿಗಳು

| ಇಂಜಿನಿಯರಿಂಗ್ ವಿಭಾಗ – 7 | |
|---|---|
| ವಿಷಯ ಸಂಖ್ಯೆ: | ಸಿಂ.02(c)–(01/25) |

## –: ಟಿಪ್ಪಣಿ :–

ವಿಷಯಃ ದಿನಾಂಕ:20.01.2025ರಂದು ಜರುಗಿದ ಕಟ್ಟಡ ಸಮಿತಿಯ ನಡಾವಳಿಗಳನ್ನು ಅನುಮೋದಿಸುವ ಕುರಿತು.

*********

ದಾವಣಗೆರೆ ವಿಶ್ವವಿದ್ಯಾನಿಲಯ ಶಿವಗಂಗೋತ್ರಿ ಆವರಣದಲ್ಲಿ ದಿನಾಂಕ:20.01.2025ರಂದು ಜರುಗಿದ ಕಟ್ಟಡ ಸಮಿತಿಯ ನಡಾವಳಿಗಳನ್ನು ದಿನಾಂಕ:21.01.2025 ರಂದು ಏರ್ಪಡಿಸಲಾಗಿರುವ ಸಿಂಡಿಕೇಟ್ ಸಾಮಾನ್ಯ ಸಭೆಯ ಅವಗಾಹನೆಗೆ ಹಾಗೂ ಅನುಮೋದನೆಗಾಗಿ ಮಂಡಿಸಿದೆ.

### :: ನಿರ್ಣಯ ::

ದಾವಣಗೆರೆ ವಿಶ್ವವಿದ್ಯಾನಿಲಯದಲ್ಲಿ ದಿನಾಂಕ:20.01.2025ರಂದು ಜರುಗಿದ ಕಟ್ಟಡ ಸಮಿತಿಯಲ್ಲಿ ಚರ್ಚಿಸಿ ನಿರ್ಣಯಿಸಲಾದ ಸಭಾ ನಡಾವಳಿಗಳನ್ನು ಸುಧೀರ್ಘವಾಗಿ ಚರ್ಚಿಸಿದ ನಂತರ ನಡಾವಳಿಗಳನ್ನು ಸಭೆಯು ಒಮ್ಮತದಿಂದ ಅನುಮೋದಿಸಿತು.

ಕುಲಸಚಿವರು

ಕುಲಪತಿಗಳು

| ಶೈಕ್ಷಣಿಕ ವಿಭಾಗ – 8 | |
|---|---|
| ವಿಷಯ ಸಂಖ್ಯೆ: | ಸಿಂ.03(a)/(01/25) |

## –: ಟಿಪ್ಪಣಿ :–

**ವಿಷಯ: 2024–25ನೇ ಶೈಕ್ಷಣಿಕ ಸಾಲಿನ ಎಂ.ಬಿ.ಎ. ಸ್ನಾತಕೋತ್ತರ ಪದವಿಗಳ ಪ್ರವೇಶಾತಿ ಶುಲ್ಕ ಪರಿಷ್ಕರಣೆ ಕುರಿತು.**

*********

ವಿಶ್ವವಿದ್ಯಾನಿಲಯದ ವ್ಯಾಪ್ತಿಗೊಳಪಡುವ MBA (Master of Business Administration) ಸ್ನಾತಕೋತ್ತರ ಪದವಿಯ ಪ್ರವೇಶಾತಿಗೆ ಸಂಬಂಧಿಸಿದಂತೆ, 2023–24ನೇ ಶೈಕ್ಷಣಿಕ ಸಾಲಿನಲ್ಲಿ ಪಿ.ಜಿ.ಸಿ.ಇ.ಟಿ. ಮುಖಾಂತರ ಪ್ರವೇಶ ಪಡೆದ ಸೀಟುಗಳಿಗೆ ನಿಗಧಿಪಡಿಸಿದ ಶುಲ್ಕವನ್ನೇ 2024–25ನೇ ಶೈಕ್ಷಣಿಕ ಸಾಲಿನಲ್ಲಿ ಪಿ.ಜಿ.ಸಿ.ಇ.ಟಿ. ಮುಖಾಂತರ ಪ್ರವೇಶ ಪಡೆದ ವಿದ್ಯಾರ್ಥಿಗಳಿಗೆ ಪ್ರವೇಶ ಶುಲ್ಕವನ್ನು ಮುಂದುವರಿಸಲಾಗಿರುತ್ತದೆ. ಆದರೆ, ಪಿ.ಜಿ.ಸಿ.ಇ.ಟಿ. ಮುಖಾಂತರ ಭರ್ತಿಯಾಗದೇ ಬಾಕಿ ಉಳಿದ ಸೀಟುಗಳಿಗೆ 2023–24ನೇ ಶೈಕ್ಷಣಿಕ ಸಾಲಿನಲ್ಲಿ ನಿಗಧಿಪಡಿಸಿದ ಶುಲ್ಕದಲ್ಲಿ **ಶೇ.10ರಷ್ಟು ಹೆಚ್ಚಿಸಿ ರೂ.95,000/–** ಸರಿದೂಗಿಸುವಂತೆ ಮಾನ್ಯ ಕುಲಪತಿಗಳು ಅನುಮೋದನೆ ನೀಡಿರುವ ಹಿನ್ನೆಲೆಯಲ್ಲಿ ಸದರಿ ವಿಷಯವನ್ನು **ದಿನಾಂಕ:04.01.2025 ರ ವಿದ್ಯಾವಿಷಯಕ ಪರಿಷತ್ ಸಭೆಯಲ್ಲಿ ಮಂಡಿಸಿ ಅನುಮೋದನೆ ಪಡೆಯಲಾಗಿದೆ.** ಈ ಕುರಿತು ದಿನಾಂಕ:21.01.2025 ರಂದು ಏರ್ಪಡಿಸಲಾಗಿರುವ ಸಿಂಡಿಕೇಟ್ ಸಾಮಾನ್ಯ ಸಭೆಯ ಅವಗಾಹನೆಗೆ ಹಾಗೂ ಘಟನೋತ್ತರ ಅನುಮೋದನೆಗಾಗಿ ಮಂಡಿಸಿದೆ.

**2024–25 ಶೈಕ್ಷಣಿಕ ಸಾಲಿನ MBA ಪದವಿ ಶುಲ್ಕದ ವಿವರ:**

| SL. NO. | FEES DETAILS | (I Year MBA FEES) FOR PG CET STUDENTS | | (II Year MBA FEES) FOR PG CET STUDENTS | | (I Year MBA FEES) FOR Non-PG CET SEATS | | (II Year MBA FEES) FOR Non-PG CET SEATS | |
|---|---|---|---|---|---|---|---|---|---|
| | | SC/ST/C1 (Rs.) | Others (Rs.) | SC/ST/C1 (Rs.) | Others (Rs.) | SC/ST/C1 (Rs.) | Others (Rs.) | SC/ST/C1 (Rs.) | Others (Rs.) |
| 1 | ADMISSION FEE | 5832 | 5832 | 5832 | 5832 | 25184 | 25184 | 25184 | 25184 |
| 2 | TUTION FEE | 31560 | 31560 | 31560 | 31560 | 31560 | 31560 | 31560 | 31560 |
| 4 | LIBRARY FEE | 880 | 880 | 880 | 880 | 880 | 880 | 880 | 880 |
| 5 | GYMKHANA FEE | 550 | 550 | 550 | 550 | 550 | 550 | 550 | 550 |
| 6 | COURSE DEVELOPMENT FEE | 1850 | 1850 | 1850 | 1850 | 1850 | 1850 | 1850 | 1850 |
| 7 | MEDICAL EXAMINATION FEE | 171 | 171 | 171 | 171 | 171 | 171 | 171 | 171 |
| 8 | REGISTRATION FEE | 2000 | 2000 | 00 | 00 | 2000 | 2000 | 00 | 00 |
| 9 | SPORTS FEE | 220 | 220 | 220 | 220 | 220 | 220 | 220 | 220 |
| 10 | STUDENT WELFARE FUND | 140 | 140 | 140 | 140 | 140 | 140 | 140 | 140 |
| 11 | TEACHER WELFARE FUND | 165 | 165 | 165 | 165 | 165 | 165 | 165 | 165 |
| 12 | READER ALLOWANCE | 303 | 5832 | 303 | 303 | 303 | 2000 | 2000 | 2000 |
| 13 | TRANSFER CERTIFICATE FEE | 715 | 31560 | 715 | 715 | 715 | 220 | 220 | 220 |
| 14 | STUDY CERTIFICATE FEE | 50 | 880 | 50 | 50 | 50 | 140 | 140 | 140 |
| 15 | NSS FEE | 160 | 550 | 160 | 160 | 160 | 165 | 165 | 165 |
| 16 | ID CARD FEE | 55 | 1850 | 55 | 55 | 55 | 55 | 55 | 55 |
| 17 | SPORTS DEVELOPMENT FEE | 242 | 171 | 242 | 242 | 242 | 242 | 242 | 242 |
| 18 | SOFT SKILLS DEVELOPMENT FEE | 1039 | 2000 | 1039 | 1039 | 1039 | 1039 | 1039 | 1039 |
| 19 | MEDICAL FEE | 200 | 220 | 200 | 200 | 200 | 200 | 200 | 200 |
| 20 | EDUCATION TECHNOLOGY | 990 | 140 | 990 | 990 | 990 | 990 | 990 | 990 |
| 21 | RED CROSS | 50 | 165 | 50 | 50 | 50 | 50 | 50 | 50 |
| 22 | UNIVERSITY PLACEMENT FEE | 250 | 250 | 250 | 250 | 250 | 250 | 250 | 250 |
| 23 | UNIVERSITY DEVELOPMENT FEE | 00 | 00 | 00 | 00 | 28226 | 28226 | 28226 | 28226 |
| | **TOTAL :** | **47422** | **47422** | **45422** | **45422** | **95000** | **95000** | **93000** | **93000** |

### :: ನಿರ್ಣಯ ::

ವಿಶ್ವವಿದ್ಯಾನಿಲಯದ ವ್ಯಾಪ್ತಿಗೊಳಪಡುವ ಎಂ.ಬಿ.ಎ. ಸ್ನಾತಕೋತ್ತರ ಪದವಿಗೆ ಪಿ.ಜಿ.ಸಿ.ಇ.ಟಿ. ಮುಖಾಂತರ ಭರ್ತಿಯಾಗದೇ ಬಾಕಿ ಉಳಿದ ಸೀಟುಗಳಿಗೆ 2023–24ನೇ ಶೈಕ್ಷಣಿಕ ಸಾಲಿನಲ್ಲಿ ನಿಗದಿಗೊಳಿಸಿದ್ದ ಶುಲ್ಕಕ್ಕೆ 2024–25ನೇ ಶೈಕ್ಷಣಿಕ ಸಾಲಿಗೆ ಶೇಕಡ 10% ರಷ್ಟು ಹೆಚ್ಚಿಸಿದ ಈ ಮೇಲ್ಕಂಡ ಪ್ರವೇಶ ಶುಲ್ಕದ ತಃಖ್ತೆಯನ್ನು ಸಭೆಯು ಘಟನೋತ್ತರವಾಗಿ ಒಮ್ಮತದಿಂದ ಅನುಮೋದಿಸಿತು.

ಕುಲಸಚಿವರು ಕುಲಪತಿಗಳು

| ಶೈಕ್ಷಣಿಕ ವಿಭಾಗ – 9 | |
|---|---|
| ವಿಷಯ ಸಂಖ್ಯೆ: | ಸಿಂ.03(b)/(01/25) |

## –: ಟಿಪ್ಪಣಿ :–

ವಿಷಯ: **2024–25ನೇ ಶೈಕ್ಷಣಿಕ ಸಾಲಿನ ಎಂ.ಸಿ.ಎ. ಸ್ನಾತಕೋತ್ತರ ಪದವಿಗಳ ಪ್ರವೇಶಾತಿ ಶುಲ್ಕ ಪರಿಷ್ಕರಣೆ ಕುರಿತು.**

*********

ವಿಶ್ವವಿದ್ಯಾನಿಲಯದ ವ್ಯಾಪ್ತಿಗೊಳಪಡುವ MCA (Master of Computer Application) ಸ್ನಾತಕೋತ್ತರ ಪದವಿಯ ಪ್ರವೇಶಾತಿಗೆ ಸಂಬಂಧಿಸಿದಂತೆ, 2023–24ನೇ ಶೈಕ್ಷಣಿಕ ಸಾಲಿನಲ್ಲಿ ಪಿ.ಜಿ.ಸಿ.ಇ.ಟಿ. ಮುಖಾಂತರ ಪ್ರವೇಶ ಪಡೆದ ಸೀಟುಗಳಿಗೆ ನಿಗಧಿಪಡಿಸಿದ ಪ್ರವೇಶ ಶುಲ್ಕವನ್ನೇ 2024–25ನೇ ಶೈಕ್ಷಣಿಕ ಸಾಲಿನಲ್ಲಿ ಪಿ.ಜಿ.ಸಿ.ಇ.ಟಿ. ಮುಖಾಂತರ ಪ್ರವೇಶ ಪಡೆದ ವಿದ್ಯಾರ್ಥಿಗಳು ಪ್ರವೇಶ ಶುಲ್ಕವನ್ನು ಮುಂದುವರಿಸಲಾಗಿರುತ್ತದೆ. ಆದರೆ ಪಿ.ಜಿ.ಸಿ.ಇ.ಟಿ. ಮುಖಾಂತರ ಭರ್ತಿಯಾಗದೇ ಬಾಕಿ ಉಳಿದ ಸೀಟುಗಳಿಗೆ 2023–24ನೇ ಶೈಕ್ಷಣಿಕ ಸಾಲಿನಲ್ಲಿ ನಿಗಧಿಪಡಿಸಿದ ಶುಲ್ಕದಲ್ಲಿ **ಶೇ.10ರಷ್ಟು ಹೆಚ್ಚಿಸಿ ರೂ.90,000/–** ಸರಿದೂಗಿಸುವಂತೆ ಮಾನ್ಯ ಕುಲಪತಿಗಳು ಅನುಮೋದನೆ ನೀಡಿರುವ ಹಿನ್ನೆಲೆಯಲ್ಲಿ ಸದರಿ ವಿಷಯವನ್ನು **ದಿನಾಂಕ:04.01.2025 ರ ವಿದ್ಯಾವಿಷಯಕ ಪರಿಷತ್ ಸಭೆಯಲ್ಲಿ ಮಂಡಿಸಿ ಅನುಮೋದನೆ ಪಡೆಯಲಾಗಿದೆ.** ಈ ಕುರಿತು ದಿನಾಂಕ:21.01.2025 ರಂದು ಏರ್ಪಡಿಸಲಾಗಿರುವ ಸಿಂಡಿಕೇಟ್ ಸಾಮಾನ್ಯ ಸಭೆಯ ಅವಗಾಹನೆಗೆ ಹಾಗೂ ಘಟನೋತ್ತರ ಅನುಮೋದನೆಗಾಗಿ ಮಂಡಿಸಿದೆ.

**: 2024–25 ಶೈಕ್ಷಣಿಕ ಸಾಲಿನ MCA ಪದವಿಯ ಶುಲ್ಕದ ವಿವರ:**

| SL. NO. | FEES DETAILS | (I Year MCA FEES) FOR PG CET STUDENTS | | (II Year MCA FEES) FOR PG CET STUDENTS | | (I Year MCA FEES) FOR Non-PG CET SEATS | | (II Year MCA FEES) FOR Non-PG CET SEATS | |
|---|---|---|---|---|---|---|---|---|---|
| | | SC/ST/C1 (Rs.) | Others (Rs.) | SC/ST/C1 (Rs.) | Others (Rs.) | SC/ST/C1 (Rs.) | Others (Rs.) | SC/ST/C1 (Rs.) | Others (Rs.) |
| 1 | ADMISSION FEE | 15000 | 15000 | 15000 | 15000 | 15000 | 15000 | 15000 | 15000 |
| 2 | TUTION FEE | 31560 | 31560 | 31560 | 31560 | 31560 | 31560 | 31560 | 31560 |
| 3 | LABORATORY FEE | 8050 | 8050 | 8050 | 8050 | 8050 | 8050 | 8050 | 8050 |
| 4 | LIBRARY FEE | 2000 | 2000 | 2000 | 2000 | 2000 | 2000 | 2000 | 2000 |
| 5 | GYMKHANA FEE | 550 | 550 | 550 | 550 | 550 | 550 | 550 | 550 |
| 6 | COURSE DEVELOPMENT FEE | 3000 | 3000 | 3000 | 3000 | 3000 | 3000 | 3000 | 3000 |
| 7 | MEDICAL EXAMINATION FEE | 150 | 150 | 150 | 150 | 150 | 150 | 150 | 150 |
| 8 | REGISTRATION FEE | 2000 | 2000 | 00 | 00 | 2000 | 2000 | 00 | 00 |
| 9 | SPORTS FEE | 200 | 200 | 200 | 200 | 200 | 200 | 200 | 200 |
| 10 | STUDENT WELFARE FUND | 140 | 140 | 140 | 140 | 140 | 140 | 140 | 140 |
| 11 | TEACHER WELFARE FUND | 165 | 165 | 165 | 165 | 165 | 165 | 165 | 165 |
| 12 | READER ALLOWANCE | 300 | 300 | 300 | 300 | 300 | 300 | 300 | 300 |
| 13 | TRANSFER CERTIFICATE FEE | 715 | 715 | 715 | 715 | 715 | 715 | 715 | 715 |
| 14 | STUDY CERTIFICATE FEE | 50 | 50 | 50 | 50 | 50 | 50 | 50 | 50 |
| 15 | NSS FEE | 160 | 160 | 160 | 160 | 160 | 160 | 160 | 160 |
| 16 | ID CARD FEE | 55 | 55 | 55 | 55 | 55 | 55 | 55 | 55 |
| 17 | SPORTS DEVELOPMENT FEE | 242 | 242 | 242 | 242 | 242 | 242 | 242 | 242 |
| 18 | SOFT SKILLS DEVELOPMENT FEE | 1000 | 1000 | 1000 | 1000 | 1000 | 1000 | 1000 | 1000 |
| 19 | MEDICAL FEE | 200 | 200 | 200 | 200 | 200 | 200 | 200 | 200 |
| 20 | EDUCATION TECHNOLOGY | 937 | 937 | 937 | 937 | 937 | 937 | 937 | 937 |
| 21 | RED CROSS | 50 | 50 | 50 | 50 | 50 | 50 | 50 | 50 |
| 22 | UNIVERSITY PLACEMENT FEE | 250 | 250 | 250 | 250 | 250 | 250 | 250 | 250 |
| 23 | UNIVERSITY DEVELOPMENT FEE | 00 | 00 | 00 | 00 | 23226 | 23226 | 23226 | 23226 |
| TOTAL | | 66774 | 66774 | 64774 | 64774 | 90000 | 90000 | 88000 | 88000 |

### :: ನಿರ್ಣಯ ::

ವಿಶ್ವವಿದ್ಯಾನಿಲಯದ ವ್ಯಾಪ್ತಿಗೊಳಪಡುವ ಎಂ.ಸಿ.ಎ. ಸ್ನಾತಕೋತ್ತರ ಪದವಿಗೆ ಪಿ.ಜಿ.ಸಿ.ಇ.ಟಿ. ಮುಖಾಂತರ ಭರ್ತಿಯಾಗದೇ ಬಾಕಿ ಉಳಿದ ಸೀಟುಗಳಿಗೆ 2023–24ನೇ ಶೈಕ್ಷಣಿಕ ಸಾಲಿನಲ್ಲಿ ನಿಗದಿಗೊಳಿಸಿದ್ದ ಶುಲ್ಕಕ್ಕೆ 2024–25ನೇ ಶೈಕ್ಷಣಿಕ ಸಾಲಿಗೆ ಶೇಕಡ 10% ರಷ್ಟು ಹೆಚ್ಚಿಸಿದ ಈ ಮೇಲ್ಕಂಡ ಪ್ರವೇಶ ಶುಲ್ಕದ ತಃಖ್ತೆಯನ್ನು ಸಭೆಯು ಘಟನೋತರವಾಗಿ ಒಮ್ಮತದಿಂದ ಅನುಮೋದಿಸಿತು.

ಕುಲಸಚಿವರು ಕುಲಪತಿಗಳು

| ಶೈಕ್ಷಣಿಕ ವಿಭಾಗ – 10 | |
|---|---|
| ವಿಷಯ ಸಂಖ್ಯೆ: | ಸಿಂ.03(c)/(01/25) |

# –: ಟಿಪ್ಪಣಿ :–

**ವಿಷಯಃ 2024–25ನೇ ಶೈಕ್ಷಣಿಕ ಸಾಲಿನ ಬಿ.ಇಡಿ. ಸ್ನಾತಕ ಪದವಿಗಳ ಪ್ರವೇಶಾತಿ ಶುಲ್ಕ ಪರಿಷ್ಕರಣೆ ಕುರಿತು.**

*********

ವಿಶ್ವವಿದ್ಯಾನಿಲಯದ ಸ್ನಾತಕ B.Ed. (Bachelor of Education) ಪದವಿಯ ಪ್ರವೇಶಾತಿ ಶುಲ್ಕಕ್ಕೆ ಸಂಬಂಧಿಸಿದಂತೆ, 2022–23 ಹಾಗೂ 2023–24 ಶೈಕ್ಷಣಿಕ ಸಾಲಿನಲ್ಲಿ ಶುಲ್ಕ ಪರಿಷ್ಕರಣೆಯಾಗಿರುವುದಿಲ್ಲ. ವಿಶ್ವವಿದ್ಯಾನಿಲಯದ ವ್ಯಾಪ್ತಿಗೊಳಪಡುವ ಎಲ್ಲಾ ಸ್ನಾತಕೋತ್ತರ ಪದವಿಯ ಪ್ರವೇಶಾತಿಗೆ ಸಂಬಂಧಿಸಿದಂತೆ, ಮಾನ್ಯ ಕುಲಪತಿಗಳ ಅಧ್ಯಕ್ಷತೆಯಲ್ಲಿ ದಿನಾಂಕ:14.08.2024ರಂದು ನಡೆದ ಡೀನರ ಸಭೆಯಲ್ಲಿ 2024–25ನೇ ಶೈಕ್ಷಣಿಕ ಸಾಲಿನ ಬಿ.ಇಡಿ. ಸ್ನಾತಕ ಪದವಿಯ ಪ್ರವೇಶಾತಿ ಶುಲ್ಕದ ವಿವರಗಳ ಮೊತ್ತದ ಪರಿಷ್ಕರಣೆ ಮಾಡುವುದರೊಂದಿಗೆ ಶುಲ್ಕವನ್ನು **ಶೇ.10 ರಷ್ಟು ಹೆಚ್ಚಿಸಿ** ಶುಲ್ಕದ ಮೊತ್ತವನ್ನು Round-Off to Next Rs.10 ಮಾಡಿ ಸರಿದೂಗಿಸುವಂತೆ ಸಭೆಯಲ್ಲಿ ನಿರ್ಣಯಿಸಲಾಗಿದೆ. ಆದ್ದರಿಂದ, ಸದರಿ ಶುಲ್ಕವನ್ನು ಪ್ರಸ್ತುತ ಸಾಲಿನಿಂದಲೇ ಪಾವತಿಸಿಕೊಳ್ಳುವ ಕುರಿತಂತೆ **ದಿನಾಂಕ:04.01.2025 ರ ವಿದ್ಯಾವಿಷಯಕ ಪರಿಷತ್ ಸಭೆಯಲ್ಲಿ ಮಂಡಿಸಿ ಅನುಮೋದನೆ ಪಡೆಯಲಾಗಿದೆ.** ಈ ಕುರಿತು ದಿನಾಂಕ:21.01.2025 ರಂದು ಏರ್ಪಡಿಸಲಾಗಿರುವ ಸಿಂಡಿಕೇಟ್ ಸಾಮಾನ್ಯ ಸಭೆಯ ಅವಗಾಹನೆಗೆ ಹಾಗೂ ಘಟನೋತ್ತರ ಅನುಮೋದನೆಗಾಗಿ ಮಂಡಿಸಿದೆ.

**:2024–25ನೇ ಸಾಲಿನ ಬಿ.ಇಡಿ. ಶುಲ್ಕದ ವಿವರ:**

| Sl. No. | Particulars | Fees Details | |
|---|---|---|---|
| | | 1st Year | 2nd Year |
| 01 | Admission Fee (University) | 2000 | 2000 |
| 02 | Registration | 1000 | - |
| 03 | University Development Fund | 2580 | 2580 |
| 04 | Sports Development Fund | 530 | 530 |
| 05 | ECA | 530 | 530 |
| 06 | Career Guidance Fund | 60 | 60 |
| 07 | Rovers & Rangers (Scouts & Guides) | 50 | 50 |
| 08 | Poor Student Fund | 40 | 40 |
| 09 | Zymkhana Fee | 550 | 550 |
| | **TOTAL** | **7340** | **6340** |

| | | |
|---|---|---|
| 01 | Within State University Fees ( Migration Fee) | 865 |
| 02 | Out of State University Fees | 3380 |

**NOTE (1):** The following fees to be collected by the concerned Colleges & shall be utilized for the Purpose for which it is collected.

| Sl. No. | Particulars | Total |
|---|---|---|
| 1 | Sport Development Fee | 86 |
| 2 | ECA | 86 |
| 3 | Red Cross | 86 |
| 4 | Skill Development | 166 |
| | **TOTAL** | **424** |

**:: ನಿರ್ಣಯ ::**

ವಿಶ್ವವಿದ್ಯಾನಿಲಯದ ವ್ಯಾಪ್ತಿಗೊಳಪಡುವ ಎಲ್ಲಾ ಸ್ನಾತಕ ಬಿ.ಇಡಿ. ಪದವಿಯ ಪ್ರವೇಶ ಶುಲ್ಕಕ್ಕೆ ಸಂಬಂಧಿಸಿದಂತೆ, ದಿನಾಂಕ:14.08.2024 ರಂದು ವಿಶ್ವವಿದ್ಯಾನಿಲಯದಲ್ಲಿ ನಡೆದ ಡೀನರ ಸಭೆಯಲ್ಲಿ – 2023–24ನೇ ಸಾಲಿನಲ್ಲಿ ನಿಗದಿಗೊಳಿಸಿದ ಶುಲ್ಕಕ್ಕೆ 2024–25ನೇ ಶೈಕ್ಷಣಿಕ ಸಾಲಿಗೆ **ಶೇಕಡ 10% ರಷ್ಟು ಹೆಚ್ಚಿಸಿ ಪರಿಷ್ಕರಿಸಿದ** ಶುಲ್ಕದ ಮೊತ್ತವನ್ನು Round-Off to Next Rs.10 ಮಾಡಿ 2024–25ನೇ ಶೈಕ್ಷಣಿಕ ಸಾಲಿನಿಂದಲೇ ಅನ್ವಯವಾಗುವಂತೆ ತೆಗೆದುಕೊಂಡಿರುವ ಡೀನರ ಸಭೆಯ ನಿರ್ಣಯವನ್ನು ಹಾಗೂ ಈ ಮೇಲ್ಕಂಡ ಶುಲ್ಕ ತಃಖ್ತೆಯನ್ನು ಸಭೆಯು ಘಟನೋತ್ತರವಾಗಿ ಒಮ್ಮತದಿಂದ ಅನುಮೋದಿಸಿತು.

ಕುಲಸಚಿವರು ಕುಲಪತಿಗಳು

| ಶೈಕ್ಷಣಿಕ ವಿಭಾಗ – 11 | |
|---|---|
| ವಿಷಯ ಸಂಖ್ಯೆ: | ಸಿಂ.03(d)/(01/25) |

## –: ಟಿಪ್ಪಣಿ :–

ವಿಷಯಃ ಸರ್ಕಾರಿ (ಸ್ವಾಯುತ್ತ) ಕಲಾ ಕಾಲೇಜಿನ ಸ್ನಾತಕೋತ್ತರ ಪದವಿಯ ಪ್ರವೇಶಾತಿ ಶುಲ್ಕ ಪಾವತಿಯ ಕುರಿತು.

*********

ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ, ಮಾನ್ಯ ಕುಲಪತಿಯವರ ಅಧ್ಯಕ್ಷತೆಯಲ್ಲಿ ದಿನಾಂಕ:14.08.2024ರಂದು ನಡೆದ ಡೀನರ ಸಭೆಯಲ್ಲಿ ಚರ್ಚಿಸಿ ವಿಶ್ವವಿದ್ಯಾನಿಲಯದ ವ್ಯಾಪ್ತಿಗೊಳಪಡುವ ಸ್ನಾತಕೋತ್ತರ ಕಾಲೇಜುಗಳಿಗೆ 2024–25ನೇ ಸಾಲಿನಲ್ಲಿ ಸ್ನಾತಕೋತ್ತರ ಪ್ರವೇಶಾತಿಗೆ ಸಂಬಂಧಿಸಿದ ಶುಲ್ಕವನ್ನು ನಿಗಧಿಪಡಿಸಲಾಗಿತ್ತು. ಹಾಗೆಯೇ ಸರ್ಕಾರಿ ಕಲಾ (ಸ್ವಾಯತ್ತ) ಕಾಲೇಜು, ಚಿತ್ರದುರ್ಗದ ಸ್ನಾತಕೋತ್ತರ ಪ್ರಥಮ ಹಾಗೂ ದ್ವಿತೀಯ ವರ್ಷದ ವಿದ್ಯಾರ್ಥಿಗಳಿಗೂ ಸಹ ಇತರೆ ಕಾಲೇಜುಗಳಿಗೆ ನಿಗಧಿಪಡಿಸಿರುವ ಶುಲ್ಕವನ್ನೇ ಪಾವತಿಸಲು ತಿಳಿಸಲಾಗಿತ್ತು. ಅದರಂತೆ, ಸದರಿ ಸಂಸ್ಥೆಯು 2017–18ನೇ ಶೈಕ್ಷಣಿಕ ಸಾಲಿನವರೆಗೆ ಪೂರ್ಣ ಶುಲ್ಕವನ್ನು ಜಮೆ ಮಾಡಿರುತ್ತಾರೆ. ಆದರೆ, 2018–19ನೇ ಶೈಕ್ಷಣಿಕ ಸಾಲಿನಿಂದ 2023–24ನೇ ಶೈಕ್ಷಣಿಕ ಸಾಲಿನವರೆಗೆ ಇತರೆ ಕಾಲೇಜುಗಳಿಗೆ ವಿಶ್ವವಿದ್ಯಾನಿಲಯವು ನಿಗಧಿಪಡಿಸಿರುವ ಶುಲ್ಕವನ್ನು ಪಾವತಿಸದೆ ನೋಂದಣಿ ಶುಲ್ಕವನ್ನು ಮಾತ್ರ ಪಾವತಿಸಿರುವುದು ಕಂಡುಬಂದಿರುತ್ತದೆ.

ಆದ್ದರಿಂದ, 2024–25ನೇ ಶೈಕ್ಷಣಿಕ ಸಾಲಿನಿಂದ ಇತರೆ ಕಾಲೇಜುಗಳಿಗೆ ನಿಗಧಿಪಡಿಸಿರುವ ಶುಲ್ಕವನ್ನೇ ಸ್ವಾಯತ್ತ ಸಂಸ್ಥೆಯಾದ ಸರ್ಕಾರಿ ಕಲಾ (ಸ್ವಾಯತ್ತ) ಕಾಲೇಜು, ಚಿತ್ರದುರ್ಗ – ಇವರು ವಿಶ್ವವಿದ್ಯಾನಿಲಯ ನಿಗದಿಪಡಿಸಿದ ಶುಲ್ಕವನ್ನು ಜಮಾ ಮಾಡುವ ಬಗ್ಗೆ ದಿನಾಂಕ:26.09.2024ರಂದು ನಡೆದ ಡೀನರ ಸಭೆಯಲ್ಲಿ ಚರ್ಚಿಸಿ ನಿರ್ಣಯಿಸಲಾಗಿರುವ ವಿಷಯವನ್ನು **ದಿನಾಂಕ:04.01.2025 ರ ವಿದ್ಯಾವಿಷಯಕ ಪರಿಷತ್ ಸಭೆಯಲ್ಲಿ ಮಂಡಿಸಿ ಅನುಮೋದನೆ ಪಡೆಯಲಾಗಿದೆ.** ಈ ಕುರಿತು ದಿನಾಂಕ:21.01.2025 ರಂದು ಏರ್ಪಡಿಸಲಾಗಿರುವ ಸಿಂಡಿಕೇಟ್ ಸಾಮಾನ್ಯ ಸಭೆಯ ಅವಗಾಹನೆಗೆ ಹಾಗೂ ಘಟನೋತ್ತರ ಅನುಮೋದನೆಗಾಗಿ ಮಂಡಿಸಿದೆ.

### :: ನಿರ್ಣಯ ::

ಸರ್ಕಾರಿ ಕಲಾ (ಸ್ವಾಯತ್ತ) ಕಾಲೇಜು, ಚಿತ್ರದುರ್ಗ ಇವರು – ವಿಶ್ವವಿದ್ಯಾನಿಲಯವು ತನ್ನ ವ್ಯಾಪ್ತಿಗೊಳಪಡುವ ಎಲ್ಲಾ ಸ್ನಾತಕೋತ್ತರ ಪದವಿ ಕಾಲೇಜುಗಳ ಪ್ರಥಮ ಹಾಗೂ ದ್ವಿತೀಯ ವರ್ಷದ ವಿದ್ಯಾರ್ಥಿಗಳಿಗೆ ನಿಗದಿಪಡಿಸಲಾದ ಪ್ರವೇಶ ಶುಲ್ಕದ ಮಾದರಿಯಲ್ಲಿ – ಸರ್ಕಾರಿ ಕಲಾ (ಸ್ವಾಯತ್ತ) ಕಾಲೇಜು, ಚಿತ್ರದುರ್ಗ ಇವರು 2024–25ನೇ ಶೈಕ್ಷಣಿಕ ಸಾಲಿನಿಂದ ನೋಂದಣಿ ಶುಲ್ಕದ ಜೊತೆಗೆ ವಿಶ್ವವಿದ್ಯಾನಿಲಯವು ಇತರೆ ಸ್ನಾತಕೋತ್ತರ ಕಾಲೇಜುಗಳಿಗೆ ನಿಗದಿಪಡಿಸಿರುವ ಶುಲ್ಕದಂತೆ ಸದರಿ ಕಾಲೇಜಿನಿಂದ ಪಾವತಿಸಿಕೊಳ್ಳಲು ಸಭೆಯು ಒಮ್ಮತದಿಂದ ಅನುಮೋದಿಸಿತು.

ಕುಲಸಚಿವರು

ಕುಲಪತಿಗಳು

| ಪ.ಜಾತಿ & ಪ.ಪಂಗಡ ಘಟಕ – 12 | |
|---|---|
| ವಿಷಯ ಸಂಖ್ಯೆ: | ಸಿಂ.04(a)/(01/25) |

## –: ಟಿಪ್ಪಣಿ :–

**ವಿಷಯಃ** **2024–25ನೇ ಶೈಕ್ಷಣಿಕ ಸಾಲಿನ ಪ.ಜಾತಿ ಮತ್ತು ಪ.ಪಂಗಡ ವಿದ್ಯಾರ್ಥಿ ಅಭಿವೃದ್ಧಿ ಘಟಕದ ಸಲಹಾ ಸಮಿತಿ ಸಭಾ ನಡಾವಳಿಗಳನ್ನು ಅನುಮೋದಿಸುವ ಕುರಿತು.**

*********

2024–25ನೇ ಸಾಲಿನ ಶೈಕ್ಷಣಿಕ ಸಾಲಿನ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡ ವಿದ್ಯಾರ್ಥಿ ಅಭಿವೃದ್ಧಿ ಘಟಕದ ಸಲಹಾ ಸಮಿತಿಯ ಸಭೆಯನ್ನು ದಿನಾಂಕ:17.12.2024ರಂದು ಬೆಳಗ್ಗೆ 11:30 ಘಂಟೆಗೆ ವಿಶ್ವವಿದ್ಯಾನಿಲಯದ ಸಿಂಡಿಕೇಟ್ ಸಭಾಂಗಣದಲ್ಲಿ ನಡೆಸಲಾಯಿತು. ಈ ಸಭೆಯಲ್ಲಿ 2024–25ನೇ ಶೈಕ್ಷಣಿಕ ಸಾಲಿನ ಪೂರ್ಣಕಾಲಿಕ ಪಿಹೆಚ್.ಡಿ. ಸಂಶೋಧನಾರ್ಥಿಗಳಿಗೆ ಶಿಷ್ಯವೇತನ ಹಂಚಿಕೆಯ ಬಗ್ಗೆ ಚರ್ಚಿಸಿ ತೀರ್ಮಾನಿಸಲಾಯಿತು. ತತ್ಸಂಬಂಧ, ಈ ಸಭೆಯು ನಡಾವಳಿಗಳನ್ನು ದಿನಾಂಕ:21.01.2025 ರಂದು ಏರ್ಪಡಿಸಲಾಗಿರುವ ಸಿಂಡಿಕೇಟ್ ಸಾಮಾನ್ಯ ಸಭೆಯ ಅವಗಾಹನೆಗೆ ಹಾಗೂ ಅನುಮೋದನೆಗಾಗಿ ಮಂಡಿಸಿದೆ.

### :: ನಿರ್ಣಯ ::

ದಿನಾಂಕ:17.12.2024ರಂದು ನಡೆದ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡ ವಿದ್ಯಾರ್ಥಿ ಅಭಿವೃದ್ಧಿ ಘಟಕದ 2024–25ನೇ ಸಾಲಿನ ಶೈಕ್ಷಣಿಕ ಸಾಲಿನ ಪೂರ್ಣಕಾಲಿಕ ಪಿಹೆಚ್.ಡಿ. ಸಂಶೋಧನಾರ್ಥಿಗಳಿಗೆ ಶಿಷ್ಯವೇತನ ಹಂಚಿಕೆಯ ಬಗ್ಗೆ ಚರ್ಚಿಸಿ ನಿರ್ಣಯಿಸಲಾದ ಸಲಹಾ ಸಮಿತಿ ಸಭೆಯ ನಡಾವಳಿಗಳನ್ನು ಸಭೆಯು ಒಮ್ಮತದಿಂದ ಅನುಮೋದಿಸಿತು.

ಮುಂದುವರೆದು, ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡ ವಿದ್ಯಾರ್ಥಿ ಅಭಿವೃದ್ಧಿ ಘಟಕದ ಸಲಹಾ ಸಮಿತಿ ಸಭೆಯನ್ನು ವರ್ಷಕ್ಕೆ ಎರಡು ಬಾರಿ ಏರ್ಪಡಿಸಿ, ಸದರಿ ಸಲಹಾ ಸಮಿತಿಗೆ ವಿಶ್ವವಿದ್ಯಾನಿಲಯದ ಒಬ್ಬ ಸಿಂಡಿಕೇಟ್ ಸದಸ್ಯರನ್ನು ನೇಮಕ ಮಾಡಲು ನಿರ್ಣಯಿಸಲಾಯಿತು.

ಕುಲಸಚಿವರು                                                  ಕುಲಪತಿಗಳು

| ಪರೀಕ್ಷಾಂಗ ವಿಭಾಗ – 13 | |
|---|---|
| ವಿಷಯ ಸಂಖ್ಯೆ: | ಸಿಂ.05(a)–(01/25) |

## –: ಟಿಪ್ಪಣಿ :–

**ವಿಷಯ: 12ನೇ ವಾರ್ಷಿಕ ಘಟಿಕೋತ್ಸವ ಪದವಿ ಪ್ರಮಾಣ ಪತ್ರ ಶುಲ್ಕ ಪರಿಷ್ಕರಣೆ ಮಾಡುವ ಕುರಿತು.**

*********

ವಿಶ್ವವಿದ್ಯಾನಿಲಯದ 12ನೇ ವಾರ್ಷಿಕ ಘಟಿಕೋತ್ಸವಕ್ಕೆ ಸಂಬಂಧಿಸಿದಂತೆ ಸ್ನಾತಕ, ಸ್ನಾತಕೋತ್ತರ ಮತ್ತು ಪಿಹೆಚ್.ಡಿ ಪದವಿ ಪರೀಕ್ಷೆಗಳಲ್ಲಿ ಉತ್ತೀರ್ಣರಾಗಿರುವ ಅಭ್ಯರ್ಥಿಗಳಿಗೆ ಕಾಲಂ (3) ಮತ್ತು (4) ರಲ್ಲಿ ಪ್ರಸ್ತಾಪಿಸಿರುವ ಘಟಿಕೋತ್ಸವ ಪ್ರಮಾಣ ಪತ್ರ ಶುಲ್ಕಗಳನ್ನು ಈ ಕೆಳಕಂಡಂತೆ ಕಾಲಂ (5) ಮತ್ತು (6) ರಲ್ಲಿ ನಮೂದಿಸಲಾಗಿರುವ ಶೇಕಡ 10% ರಷ್ಟು ಶುಲ್ಕಗಳನ್ನು ಪರಿಷ್ಕರಣೆ ಮಾಡುವ ಕುರಿತು **ದಿನಾಂಕ:04.01.2025 ರ ವಿದ್ಯಾವಿಷಯಕ ಪರಿಷತ್ ಸಭೆಯಲ್ಲಿ ಮಂಡಿಸಿ ಅನುಮೋದನೆ ಪಡೆಯಲಾಗಿದೆ.** ಈ ಕುರಿತು ದಿನಾಂಕ:21.01.2025 ರಂದು ಏರ್ಪಡಿಸಲಾಗಿರುವ ಸಿಂಡಿಕೇಟ್ ಸಾಮಾನ್ಯ ಸಭೆಯ ಅವಗಾಹನೆಗೆ ಹಾಗೂ ಅನುಮೋದನೆಗಾಗಿ ಮಂಡಿಸಿದೆ.

| ಕ್ರ. ಸಂ. | ವಿವರ | ಪ್ರಸ್ತುತ ಶುಲ್ಕದ ವಿವರ | | ಒಟ್ಟು ಹೆಚ್ಚಿಸಲಾದ ಶುಲ್ಕದ ವಿವರ | | Rounded Off | |
|---|---|---|---|---|---|---|---|
| | | ಸಾಮಾನ್ಯ | ಎಸ್.ಸಿ/ ಎಸ್.ಟಿ. | ಸಾಮಾನ್ಯ | ಎಸ್.ಸಿ/ ಎಸ್.ಟಿ. | ಸಾಮಾನ್ಯ | ಎಸ್.ಸಿ/ ಎಸ್.ಟಿ. |
| **1** | **2** | **3** | **4** | **5** | **6** | **7** | **8** |
| 1 | ಸ್ನಾತಕ ಪದವಿ | 880.00 | 715.00 | 968.00 | 786.50 | 970.00 | 790.00 |
| 2 | ಸ್ನಾತಕೋತ್ತರ ಪದವಿ | 1,355.00 | 850.00 | 1,490.50 | 935.00 | 1,490.00 | 935.00 |
| 3 | ಪಿಹೆಚ್.ಡಿ. | 2,555.00 | 2,240.00 | 2,810.50 | 2,464.00 | 2,810.00 | 2,465.00 |

### :: ನಿರ್ಣಯ ::

ದಾವಣಗೆರೆ ವಿಶ್ವವಿದ್ಯಾನಿಲಯದ 12ನೇ ವಾರ್ಷಿಕ ಘಟಿಕೋತ್ಸವಕ್ಕೆ ಸಂಬಂಧಿಸಿದಂತೆ ಸ್ನಾತಕ, ಸ್ನಾತಕೋತ್ತರ ಮತ್ತು ಪಿಹೆಚ್.ಡಿ ಪದವಿ ಪರೀಕ್ಷೆಗಳಲ್ಲಿ ಉತ್ತೀರ್ಣರಾಗಿರುವ ಅಭ್ಯರ್ಥಿಗಳಿಗೆ ಕಾಲಂ (3) ಮತ್ತು (4) ರಲ್ಲಿ ಪ್ರಸ್ತಾಪಿಸಿರುವ ಘಟಿಕೋತ್ಸವ ಪ್ರಮಾಣ ಪತ್ರ ಶುಲ್ಕಗಳಿಗೆ ಕಾಲಂ (5) ಮತ್ತು (6) ರಲ್ಲಿರುವಂತೆ **ಶೇಕಡ 10% ರಷ್ಟು ಶುಲ್ಕಗಳನ್ನು ಪರಿಷ್ಕರಣೆ ಮಾಡಿ** ಹಾಗೂ ಕಾಲಂ (7) ಮತ್ತು (8) ರಲ್ಲಿ **Rounded Off** ಮಾಡಲಾದ ಈ ಮೇಲ್ಕಂಡ ಶುಲ್ಕ ತಃಖ್ತೆಯನ್ನು ಸಭೆಯು ಒಮ್ಮತದಿಂದ ಅನುಮೋದಿಸಿತು.

ಕುಲಸಚಿವರು

ಕುಲಪತಿಗಳು

| ಪರೀಕ್ಷಾಂಗ ವಿಭಾಗ – 14 | |
|---|---|
| ವಿಷಯ ಸಂಖ್ಯೆ: | ಸಿಂ.05(b)–(01/25) |

# –: ಟಿಪ್ಪಣಿ :–

**ವಿಷಯ: ವಿಶ್ವವಿದ್ಯಾನಿಲಯದ ವಿವಿಧ ಸ್ನಾತಕ ಮತ್ತು ಸ್ನಾತಕೋತ್ತರ ಪದವಿ ಪಡೆಯುವ ವಿದ್ಯಾರ್ಥಿಗಳಿಗೆ ರ್‍ಯಾಂಕ್ ನೀಡುವ ಸಂಬಂಧ ನಿಯಮಗಳಿಗೆ ಅನುಮೋದನೆ ನೀಡುವ ಕುರಿತು.**

*********

ದಾವಣಗೆರೆ ವಿಶ್ವವಿದ್ಯಾನಿಲಯದಲ್ಲಿ ವಿವಿಧ ಸ್ನಾತಕ ಮತ್ತು ಸ್ನಾತಕೋತ್ತರ ಪದವಿ ಪಡೆಯುವ ವಿದ್ಯಾರ್ಥಿಗಳಿಗೆ ರ್‍ಯಾಂಕ್ ನೀಡುವ ಸಂಬಂಧ – Rules Governing the Declaration of Ranks for under Graduate and Post-Graduate Programmes - ನಿಯಮಗಳನ್ನು ರಚಿಸಿ **ದಿನಾಂಕ:04.01.2025 ರ ವಿದ್ಯಾವಿಷಯಕ ಪರಿಷತ್ ಸಭೆಯಲ್ಲಿ ಮಂಡಿಸಿ ಅನುಮೋದನೆ ಪಡೆಯಲಾಗಿದೆ.** ಈ ಕುರಿತು ದಿನಾಂಕ:21.01.2025 ರಂದು ಏರ್ಪಡಿಸಲಾಗಿರುವ ಸಿಂಡಿಕೇಟ್ ಸಾಮಾನ್ಯ ಸಭೆಯ ಅವಗಾಹನೆಗೆ ಹಾಗೂ ಅನುಮೋದನೆಗಾಗಿ ಮಂಡಿಸಿದೆ.

:: ನಿರ್ಣಯ ::

ದಾವಣಗೆರೆ ವಿಶ್ವವಿದ್ಯಾನಿಲಯದಲ್ಲಿ ವಿವಿಧ ಸ್ನಾತಕ ಮತ್ತು ಸ್ನಾತಕೋತ್ತರ ಪದವಿ ಪಡೆಯುವ ವಿದ್ಯಾರ್ಥಿಗಳಿಗೆ ರ್‍ಯಾಂಕ್ ನೀಡುವ ಸಂಬಂಧ – Rules Governing the Declaration of Ranks for under Graduate and Post-Graduate Programmes - ನಿಯಮಗಳನ್ನು ಕುಲಸಚಿವರು (ಪರೀಕ್ಷಾಂಗ) ಇವರು – ಸಂಕ್ಷಿಪ್ತವಾಗಿ ವಿವರಿಸಿದ ನಂತರ ಸಭೆಯು ಒಮ್ಮತದಿಂದ ಅನುಮೋದಿಸಿತು.

ಕುಲಸಚಿವರು

ಕುಲಪತಿಗಳು

| ಪರೀಕ್ಷಾಂಗ ವಿಭಾಗ – 15 | |
|---|---|
| ವಿಷಯ ಸಂಖ್ಯೆ: | ಸಿಂ.05(c)-(01/25) |

## –: ಟಿಪ್ಪಣಿ :–

**ವಿಷಯಃ 12ನೇ ವಾರ್ಷಿಕ ಘಟಿಕೋತ್ಸವ ಸಮಾರಂಭಕ್ಕೆ ಪೆಂಡಾಲ್ ಮತ್ತು ಊಟದ ವ್ಯವಸ್ಥೆಗಳಿಗೆ ಇ-ಟೆಂಡರ್ ಆಹ್ವಾನಿಸುವ ಕುರಿತು.**

*********

ವಿಶ್ವವಿದ್ಯಾನಿಲಯದಲ್ಲಿ ಮುಂಬರುವ ದಿನಗಳಲ್ಲಿ ನಡೆಸಲಾಗುವ 12ನೇ ವಾರ್ಷಿಕ ಘಟಿಕೋತ್ಸವ ಸಮಾರಂಭಕ್ಕೆ ಹೆಚ್ಚಿನ ಸಂಖ್ಯೆಯಲ್ಲಿ ವಿದ್ಯಾರ್ಥಿಗಳು, ಪೋಷಕರು ಮತ್ತು ಗಣ್ಯವ್ಯಕ್ತಿಗಳು ಪಾಲ್ಗೊಳ್ಳುವುದರಿಂದ, ಈ ಕಾರ್ಯಕ್ರಮವನ್ನು ಯಶಸ್ವಿಯಾಗಿ ನಿರ್ವಹಿಸಲು ಪೆಂಡಾಲ್, ಆಸನಗಳ ವ್ಯವಸ್ಥೆ, ಲೈಟಿಂಗ್ ವ್ಯವಸ್ಥೆ, ಸೌಂಡ್ ಸಿಸ್ಟಮ್, ಊಟದ ವ್ಯವಸ್ಥೆ ಹಾಗೂ ಇನ್ನಿತರೆ ವ್ಯವಸ್ಥೆಗಳನ್ನು ಪಡೆಯುವ ಸಲುವಾಗಿ ಇ-ಪೋರ್ಟಲ್‌ನಲ್ಲಿ ಟೆಂಡರ್ ಆಹ್ವಾನಿಸಿ ಕ್ರಮಕೈಗೊಳ್ಳಬೇಕಾಗಿರುತ್ತದೆ. ತತ್ಸಂಬಂಧವಾಗಿ. ದಿನಾಂಕ:21.01.2025 ರಂದು ಏರ್ಪಡಿಸಲಾಗಿರುವ ಸಿಂಡಿಕೇಟ್ ಸಾಮಾನ್ಯ ಸಭೆಯ ಅವಗಾಹನೆಗೆ ಹಾಗೂ ಅನುಮೋದನೆಗಾಗಿ ಮಂಡಿಸಿದೆ.

### :: ನಿರ್ಣಯ ::

ವಿಶ್ವವಿದ್ಯಾನಿಲಯದದ 12ನೇ ವಾರ್ಷಿಕ ಘಟಿಕೋತ್ಸವ ಸಮಾರಂಭವನ್ನು ಯಶಸ್ವಿಯಾಗಿ ನಿರ್ವಹಿಸಲು ಪೆಂಡಾಲ್, ಆಸನಗಳ ವ್ಯವಸ್ಥೆ, ಲೈಟಿಂಗ್ ವ್ಯವಸ್ಥೆ, ಸೌಂಡ್ ಸಿಸ್ಟಮ್, ಊಟದ ವ್ಯವಸ್ಥೆ ಹಾಗೂ ಇನ್ನಿತರೆ ವ್ಯವಸ್ಥೆಗಳನ್ನು ಪಡೆಯಲು ನಿಯಮಾನುಸಾರವಾಗಿ ಇ-ಪೋರ್ಟಲ್‌ನಲ್ಲಿ ಟೆಂಡರ್ ಆಹ್ವಾನಿಸಲು ಸಭೆಯು ಒಮ್ಮತದಿಂದ ನಿರ್ಣಯಿಸಿತು.

ಕುಲಸಚಿವರು

ಕುಲಪತಿಗಳು

| ಪರೀಕ್ಷಾಂಗ ವಿಭಾಗ – 16 | |
|---|---|
| ವಿಷಯ ಸಂಖ್ಯೆ: | ಸಿಂ.05(d)–(01/25) |

## –ಃ ಟಿಪ್ಪಣಿ ಃ–

ವಿಷಯಃ ವಿಶ್ವವಿದ್ಯಾನಿಲಯದ 12ನೇ ವಾರ್ಷಿಕ ಘಟಿಕೋತ್ಸವ ಸಮಾರಂಭದಲ್ಲಿ ಗೌರವ ಡಾಕ್ಟರೇಟ್ ನೀಡಲು ಘನತೆವೆತ್ತ ರಾಜ್ಯಪಾಲರು ಸಮಿತಿಯನ್ನು ರಚಿಸಬೇಕಾಗಿದ್ದು, ಸಿಂಡಿಕೇಟ್ ವತಿಯಿಂದ ಒಬ್ಬ ಪ್ರತಿನಿಧಿಯನ್ನು ಸೂಚಿಸುವ ಕುರಿತು.

*********

ವಿಶ್ವವಿದ್ಯಾನಿಲಯದಲ್ಲಿ 2025 ರ ಫೆಬ್ರವರಿ ಮಾಹೆಯಲ್ಲಿ ಜರುಗಲಿರುವ ವಿಶ್ವವಿದ್ಯಾನಿಲಯದ 12ನೇ ವಾರ್ಷಿಕ ಘಟಿಕೋತ್ಸವ ಸಮಾರಂಭದಲ್ಲಿ ಘನತೆವೆತ್ತ ಮಾನ್ಯ ರಾಜ್ಯಪಾಲರಿಂದ ರಚಿಸಲ್ಪಡುವ ಸಮಿತಿಗೆ ವಿಶ್ವವಿದ್ಯಾನಿಲಯದ ಸಿಂಡಿಕೇಟ್ ವತಿಯಿಂದ ಒಬ್ಬ ಪ್ರತಿನಿಧಿಯನ್ನು ಆಯ್ಕೆ ಮಾಡಬೇಕಾಗಿರುವ ಕುರಿತು ದಿನಾಂಕ:21.01.2025 ರ ಸಿಂಡಿಕೇಟ್ ಸಾಮಾನ್ಯ ಸಭೆಯ ಅವಗಾಹನೆಗೆ ಹಾಗೂ ಅನುಮೋದನೆಗೆ ಸಲ್ಲಿಸಲಾಗಿದೆ.

:: ನಿರ್ಣಯ ::

ವಿಶ್ವವಿದ್ಯಾನಿಲಯದ 12ನೇ ವಾರ್ಷಿಕ ಘಟಿಕೋತ್ಸವ ಸಮಾರಂಭದಲ್ಲಿ ಗೌರವ ಡಾಕ್ಟರೇಟ್ ನೀಡಲು ಘನತೆವೆತ್ತ ಮಾನ್ಯ ರಾಜ್ಯಪಾಲರು ರಚಿಸಲ್ಪಡುವ ಸಮಿತಿಗೆ ಪ್ರೊ. ಕೆ. ಸಿದ್ದಪ್ಪ, ವಿಶ್ರಾಂತ ಕುಲಪತಿಗಳು – ಇವರನ್ನು ಸಿಂಡಿಕೇಟ್ ವತಿಯಿಂದ ಪ್ರತಿನಿಧಿಯನ್ನಾಗಿ ಆಯ್ಕೆ ಮಾಡಿ ಸಭೆಯು ಒಮ್ಮತದಿಂದ ಅನುಮೋದಿಸಿತು.

ಕುಲಸಚಿವರು ಕುಲಪತಿಗಳು

| ಪರೀಕ್ಷಾಂಗ ವಿಭಾಗ – 17 | |
|---|---|
| ವಿಷಯ ಸಂಖ್ಯೆ: | ಸಿಂ.05(e)–(01/25) |

## –: ಟಿಪ್ಪಣಿ :–

ವಿಷಯಃ ವಿಶ್ವವಿದ್ಯಾನಿಲಯದ 12ನೇ ವಾರ್ಷಿಕ ಘಟಿಕೋತ್ಸವ ಸಮಾರಂಭದಲ್ಲಿ ಗೌರವ ಡಾಕ್ಟರೇಟ್ ನೀಡಲು ಘನತೆವೆತ್ತ ಮಾನ್ಯ ರಾಜ್ಯಪಾಲರಿಗೆ ಅರ್ಜಿಗಳನ್ನು ಕಳುಹಿಸುವ ಕುರಿತು.

****

ವಿಶ್ವವಿದ್ಯಾನಿಲಯದಲ್ಲಿ 2025 ರ ಫೆಬ್ರವರಿ ಮಾಹೆಯಲ್ಲಿ ಜರುಗಲಿರುವ ವಿಶ್ವವಿದ್ಯಾನಿಲಯದ 12ನೇ ವಾರ್ಷಿಕ ಘಟಿಕೋತ್ಸವ ಸಮಾರಂಭದದಲ್ಲಿ ಗೌರವ ಡಾಕ್ಟರೇಟ್ ಪದವಿ ನೀಡುವ ಸಂಬಂಧ ಸ್ವೀಕೃತಗೊಳ್ಳುವ (ಈಗಾಗಲೇ 03 ಮನವಿಗಳು ಸ್ವೀಕೃತಗೊಂಡಿರುವ) (CV) ಮನವಿಗಳನ್ನು ಘನತೆವೆತ್ತ ಮಾನ್ಯ ರಾಜ್ಯಪಾಲರಿಗೆ ಸಲ್ಲಿಸಲು ದಿನಾಂಕ:21.01.2025 ರ ಸಿಂಡಿಕೇಟ್ ಸಾಮಾನ್ಯ ಸಭೆಯ ಅವಗಾಹನೆಗೆ ಹಾಗೂ ಅನುಮೋದನೆಗೆ ಸಲ್ಲಿಸಲಾಗಿದೆ.

## :: ನಿರ್ಣಯ ::

ವಿಶ್ವವಿದ್ಯಾನಿಲಯದ 12ನೇ ವಾರ್ಷಿಕ ಘಟಿಕೋತ್ಸವ ಸಮಾರಂಭದದಲ್ಲಿ ಗೌರವ ಡಾಕ್ಟರೇಟ್ ಪದವಿ ನೀಡುವ ಸಂಬಂಧ ವಿಶ್ವವಿದ್ಯಾನಿಲಯಕ್ಕೆ ಸ್ವೀಕೃತಗೊಂಡ CV ಮನವಿಗಳನ್ನು ಘನತೆವೆತ್ತ ಮಾನ್ಯ ರಾಜ್ಯಪಾಲರಿಗೆ ಕಳುಹಿಸಲು ಸಭೆಯು ಒಮ್ಮತದಿಂದ ಅನುಮೋದನೆ ನೀಡಿತು.

ಕುಲಸಚಿವರು

ಕುಲಪತಿಗಳು

| ಪರೀಕ್ಷಾಂಗ ವಿಭಾಗ – 18 | |
|---|---|
| ವಿಷಯ ಸಂಖ್ಯೆ: | ಸಿಂ.05(f)–(01/25) |

## –ಃ ಟಿಪ್ಪಣಿ ಃ–

**ವಿಷಯಃ ವಿಶ್ವವಿದ್ಯಾನಿಲಯದಲ್ಲಿ 12ನೇ ವಾರ್ಷಿಕ ಘಟಿಕೋತ್ಸವ ಸಮಾರಂಭಕ್ಕೆ ಸ್ವರ್ಣಪದಕ (Gold Medal) ಗಳನ್ನು ಖರೀದಿಸುವ ಕುರಿತು.**

****

ವಿಶ್ವವಿದ್ಯಾನಿಲಯದಲ್ಲಿ 2025 ರ ಫೆಬ್ರವರಿ ಮಾಹೆಯಲ್ಲಿ ಜರುಗಲಿರುವ ವಿಶ್ವವಿದ್ಯಾನಿಲಯದ 12ನೇ ವಾರ್ಷಿಕ ಘಟಿಕೋತ್ಸವ ಸಮಾರಂಭದಲ್ಲಿ ಸ್ನಾತಕ ಮತ್ತು ಸ್ನಾತಕೋತ್ತರ ಪದವಿಗಳಲ್ಲಿ ವಿಭಾಗವಾರು ಅತೀ ಹೆಚ್ಚು ಅಂಕಗಳನ್ನು ಗಳಿಸಿದ ವಿದ್ಯಾರ್ಥಿಗಳಿಗೆ ದಾನಿಗಳ ಧತ್ತಿನಿಧಿಯಿಂದ ಸ್ವರ್ಣ ಪದಕಗಳನ್ನು ಪ್ರಧಾನ ಮಾಡಬೇಕಾಗಿರುತ್ತದೆ. ಈ ಸಂಬಂಧವಾಗಿ ಸ್ವರ್ಣ ಪದಕಗಳನ್ನು ಖರೀದಿ ಮಾಡಲು ನಿಯಮನುಸಾರ ಕ್ರಮಕೈಗೊಳ್ಳಬೇಕಾಗಿರುತ್ತದೆ.

ತತ್ಸಬಂಧವಾಗಿ, ಈ ವಿಷಯವನ್ನು ದಿನಾಂಕ:21.01.2025ರಂದು ಏರ್ಪಡಿಸಲಾಗಿರುವ ಸಿಂಡಿಕೇಟ್ ಸಾಮಾನ್ಯ ಸಭೆಯ ಅವಗಾಹನೆಗೆ ಹಾಗೂ ಅನುಮೋದನೆಗಾಗಿ ಮಂಡಿಸಲಾಗಿದೆ.

### :: ನಿರ್ಣಯ ::

ವಿಶ್ವವಿದ್ಯಾನಿಲಯದ 12ನೇ ವಾರ್ಷಿಕ ಘಟಿಕೋತ್ಸವ ಸಮಾರಂಭದದಲ್ಲಿ ಸ್ನಾತಕ ಮತ್ತು ಸ್ನಾತಕೋತ್ತರ ಪದವಿಗಳಲ್ಲಿ ವಿಭಾಗವಾರು ಅತೀ ಹೆಚ್ಚು ಅಂಕಗಳನ್ನು ಗಳಿಸಿದ ವಿದ್ಯಾರ್ಥಿಗಳಿಗೆ ದಾನಿಗಳ ಧತ್ತಿನಿಧಿಯಿಂದ ಸ್ವರ್ಣ ಪದಕಗಳನ್ನು ಅಂದಿನ ದಿನದ ಬಂಗಾರದ ದರಕ್ಕನುಗುಣವಾಗಿ ಸ್ವರ್ಣ(ಬೆಳ್ಳಿ ಪದಕಕ್ಕೆ ಬಂಗಾರದ ಲೇಪನ) ಪದಕಗಳನ್ನು ಖರೀದಿಸಲು ಸಭೆಯು ಒಮ್ಮತದಿಂದ ಅನುಮೋದನೆ ನೀಡಿತು.

ಕುಲಸಚಿವರು

ಕುಲಪತಿಗಳು

| ಪರೀಕ್ಷಾಂಗ ವಿಭಾಗ – 19 | |
|---|---|
| ವಿಷಯ ಸಂಖ್ಯೆ: | ಸಿಂ.05(g)–(01/25) |

## –: ಟಿಪ್ಪಣಿ :–

ವಿಷಯ: ಜುಲೈ/ಆಗಸ್ಟ್–2024ನೇ ಮಾಹೆಯ ಸ್ನಾತಕ/ ಸ್ನಾತಕೋತ್ತರ/ ಬಿ.ಇಡಿ ಪದವಿ ಪರೀಕ್ಷೆಯ "ಪರಿಕ್ಷಾ ಅಕ್ರಮಗಳ ವಿಚಾರಣೆ ಮತ್ತು ಶಿಸ್ತು ಪಾಲನಾ ಸಮಿತಿಯ" ಸಭಾ ನಡಾವಳಿಗಳನ್ನು ಅನುಮೋದಿಸುವ ಕುರಿತು.

****

ವಿಶ್ವವಿದ್ಯಾನಿಲಯದಲ್ಲಿ ಜುಲೈ/ಆಗಸ್ಟ್–2024ರ ಮಾಹೆಯಲ್ಲಿ ನಡೆದ ಸ್ನಾತಕ/ಸ್ನಾತಕೋತ್ತರ/ ಬಿ.ಇಡಿ ಪದವಿ ಪರೀಕ್ಷೆಗಳಲ್ಲಿ ಪರೀಕ್ಷಾ ಅಕ್ರಮಗಳಲ್ಲಿ ಭಾಗಿಯಾಗಿದ್ದ ವಿದ್ಯಾರ್ಥಿಗಳನ್ನು ದಿನಾಂಕ:27.11.2024 ರಂದು ನಡೆದ "ಪರೀಕ್ಷಾ ಅಕ್ರಮಗಳ ವಿಚಾರಣೆ ಮತ್ತು ಶಿಸ್ತು ಪಾಲನಾ ಸಮಿತಿಯು" ವಿಚಾರಣೆ ನಡೆಸಿರುತ್ತದೆ. ಸದರಿ ಸಮಿತಿಯ ಸಭಾ ನಡಾವಳಿಗಳನ್ನು ದಿನಾಂಕ:21.01.2025 ರಂದು ಏರ್ಪಡಿಸಲಾಗಿರುವ ಸಿಂಡಿಕೇಟ್ ಸಾಮಾನ್ಯ ಸಭೆಯ ಅವಗಾಹನೆಗೆ ಹಾಗೂ ಅನುಮೋದನೆಗಾಗಿ ಮಂಡಿಸಲಾಗಿದೆ.

## :: ನಿರ್ಣಯ ::

ವಿಶ್ವವಿದ್ಯಾನಿಲಯದ ವ್ಯಾಪ್ತಿಗೊಳಪಡುವ ಕಾಲೇಜುಗಳಲ್ಲಿ – ಜುಲೈ/ಆಗಸ್ಟ್–2024ರ ಮಾಹೆಯಲ್ಲಿ ನಡೆದ ಸ್ನಾತಕ/ಸ್ನಾತಕೋತ್ತರ/ ಬಿ.ಇಡಿ ಪದವಿ ಪರೀಕ್ಷೆಗಳಲ್ಲಿ ಪರೀಕ್ಷಾ ಅಕ್ರಮಗಳಲ್ಲಿ ಭಾಗಿಯಾಗಿದ್ದ ವಿದ್ಯಾರ್ಥಿಗಳಿಗೆ ಸಂಬಂಧಿಸಿದಂತೆ – ದಿನಾಂಕ:27.11.2024 ರಂದು ನಡೆದ "ಪರೀಕ್ಷಾ ಅಕ್ರಮಗಳ ವಿಚಾರಣೆ ಮತ್ತು ಶಿಸ್ತು ಪಾಲನಾ ಸಮಿತಿಯ" ಸಭಾ ನಡಾವಳಿಗಳನ್ನು ಸಭೆಯು ಒಮ್ಮತದಿಂದ ಅನುಮೋದಿಸಿತು.

ಕುಲಸಚಿವರು

ಕುಲಪತಿಗಳು

| ಪರೀಕ್ಷಾಂಗ ವಿಭಾಗ – 20 | |
|---|---|
| ವಿಷಯ ಸಂಖ್ಯೆ: | ಸಿಂ.05(h)–(01/25) |

## –: ಟಿಪ್ಪಣಿ :–

**ವಿಷಯಃ ಉಪ ಸಮಿತಿ ಸಭಾ ನಡಾವಳಿಗಳನ್ನು ಅನುಮೋದನೆಗಾಗಿ ಸಲ್ಲಿಸುವ ಕುರಿತು.**

****

ವಿಶ್ವವಿದ್ಯಾನಿಲಯದಲ್ಲಿ M/s Uniclare Solutions Pvt. Ltd., Bengalure & M/s Logisys, Bengaluru – ಈ ಎರಡು ಸಂಸ್ಥೆಗಳಿಂದ ಪರೀಕ್ಷಾ ತಂತ್ರಾಂಶ ಸೇವೆ ಪಡೆಯಲಾಗಿದ್ದು, ಹಣ ಪಾವತಿಯ ಬಿಲ್ಲುಗಳಲ್ಲಿ GST ಕಟಾವಣೆ/ವಿನಾಯಿತಿ ನೀಡುವ ಸಂಬಂಧ ವರದಿ ನೀಡಲು ರಚಿಸಲಾದ ಉಪಸಮಿತಿ ಸಭೆಯನ್ನು (ಮುಂದುವರೆದ ಸಭೆ) ದಿನಾಂಕ:15.01.2025ರಂದು ಏರ್ಪಡಿಸಲಾಗಿತ್ತು. ಸದರಿ ಸಭೆಯಲ್ಲಿ ಕೈಗೊಂಡ ನಿರ್ಣಯಗಳ ಸಭಾ ನಡಾವಳಿಗಳನ್ನು ದಿನಾಂಕ:21.01.2025 ರಂದು ಏರ್ಪಡಿಸಲಾಗಿರುವ ಸಿಂಡಿಕೇಟ್ ಸಾಮಾನ್ಯ ಸಭೆಯ ಅವಗಾಹನೆಗೆ ಹಾಗೂ ಅನುಮೋದನೆಗಾಗಿ ಮಂಡಿಸಲಾಗಿದೆ.

## :: ನಿರ್ಣಯ ::

ವಿಶ್ವವಿದ್ಯಾನಿಲಯದ ಪರೀಕ್ಷಾ ತಂತ್ರಾಂಶ ಸಂಸ್ಥೆಗಳಾದ – M/s Uniclare Solutions Pvt. Ltd., Bengalure & M/s Logisys, Bengaluru – ಈ ಎರಡು ಸಂಸ್ಥೆಗಳಿಂದ ಪರೀಕ್ಷಾ ತಂತ್ರಾಂಶ ಸೇವೆ ಪಡೆಯಲಾದ ಹಣ ಪಾವತಿಯ ಬಿಲ್ಲುಗಳಲ್ಲಿ GST ಕಟಾವಣೆ/ವಿನಾಯಿತಿ ನೀಡುವ ಸಂಬಂಧ ದಿನಾಂಕ:15.01.2025ರಂದು ಉಪಸಮಿತಿ ಸಭೆ (ಮುಂದುವರೆದ ಸಭೆ)ಯಲ್ಲಿ ಚರ್ಚಿಸಿ ನಿರ್ಣಯಿಸಲಾದ ಸಭಾ ನಡಾವಳಿಗಳನ್ನು ಸಭೆಯು ಒಮ್ಮತದಿಂದ ಅನುಮೋದಿಸಿತು.

ಕುಲಸಚಿವರು

ಕುಲಪತಿಗಳು

| ಪರೀಕ್ಷಾಂಗ ವಿಭಾಗ – 21 | |
|---|---|
| ವಿಷಯ ಸಂಖ್ಯೆ: | ಸಿಂ.05(h)–(01/25) |

## –: ಟಿಪ್ಪಣಿ :–

**ವಿಷಯಃ ಪ್ರಥಮ ಸೆಮಿಸ್ಟರ್ ಬಿ.ಎಸ್ಸಿ/ ಬಿ.ಸಿ.ಎ. ಪದವಿ ಪರೀಕ್ಷೆ ಪ್ರಶ್ನೆ ಪತ್ರಿಕೆಯಲ್ಲಿ ನ್ಯೂನತೆ ಕಂಡುಬಂದಿರುವ ಕುರಿತು.**

****

ವಿಶ್ವವಿದ್ಯಾನಿಲಯದ ವ್ಯಾಪ್ತಿಯಲ್ಲಿ ಬರುವ ವಿವಿಧ ಪರೀಕ್ಷಾ ಕೇಂದ್ರಗಳಲ್ಲಿ ಜನವರಿ/ ಫೆಬ್ರವರಿ 2025ರಲ್ಲಿ ಸ್ನಾತಕ ಪದವಿ ಪರೀಕ್ಷೆಗಳನ್ನು ಪರೀಕ್ಷಾ ವೇಳಾಪಟ್ಟಿಯಂತೆ ಜರುಗುತ್ತಿವೆ. ಅದರಂತೆ, ಪುನರಾವರ್ತಿತ ವಿದ್ಯಾರ್ಥಿಗಳಿಗೆ ದಿನಾಂಕ:17.01.2025 ರಂದು ಸಂಬಂಧಪಟ್ಟ ಪರೀಕ್ಷಾ ಕೇಂದ್ರಗಳಲ್ಲಿ ನಡೆಸಲಾದ ಸ್ನಾತಕ ಪದವಿ ಬಿ.ಎಸ್ಸಿ/ಬಿ.ಸಿ.ಎ. ಪ್ರಥಮ ಸೆಮಿಸ್ಟರ್ ಇಂಗ್ಲೀಷ್ ವಿಷಯದ Paper-I Living English ಪರೀಕ್ಷೆಯ ಪತ್ರಿಕೆಯಲ್ಲಿ 1 ಅಂಕಗಳಿಗೆ Out of Syllabus ಪ್ರಶ್ನೆಗಳು ಇರುತ್ತವೆ.

ಈ ಕುರಿತು, ಸದರಿ ಪ್ರಶ್ನೆ ಪತ್ರಿಕೆ (QP Code : 30402) ಸಿದ್ದಪಡಿಸಿದ ಪರೀಕ್ಷಕರು ತಮ್ಮ ನಿರ್ಲಕ್ಷತನದಿಂದ ಈ ಪ್ರಶ್ನೆ ಪತ್ರಿಕೆಯನ್ನು ಸಿದ್ದಪಡಿಸಿರುತ್ತಾರೆ. ಮುಂದುವರೆದು, ಪರೀಕ್ಷಾ ಪರೀಕ್ಷಾ ರಹಸ್ಯ ಕಾರ್ಯನಿರ್ವಹಣೆ ಸಂದರ್ಭದಲ್ಲಿ ಸ್ನಾತಕ ಇಂಗ್ಲೀಷ್ ವಿಭಾಗದ ಪರೀಕ್ಷಾ ಮಂಡಳಿ(ಬಿ.ಓ.ಇ.) ಯಿಂದ ಕರ್ತವ್ಯ ಲೋಪವಾಗಿರುವುದು ಸಾಬೀತಾಗಿರುವುದು ಕಂಡುಬರುತ್ತದೆ.

ತತ್ಸಂಬಂಧ, ಸದರಿ ಪ್ರಶ್ನೆ ಪತ್ರಿಕೆಯ ನ್ಯೂನತೆಯನ್ನು ವಿದ್ಯಾರ್ಥಿಗಳ ಹಿತದೃಷ್ಠಿಯಿಂದ ಸರಿಪಡಿಸಲು ಹಾಗೂ ಪರೀಕ್ಷಾ ಮಂಡಳಿ ಸದಸ್ಯರ ವಿರುದ್ಧ ನಿಯಮಾವಳಿಗಳನುಸಾರ ಶಿಸ್ತಿನ ಕ್ರಮ ಜರುಗಿಸುವ ಸಂಬಂಧ ಈ ವಿಷಯವನ್ನು ದಿನಾಂಕ:21.01.2025 ರಂದು ಏರ್ಪಡಿಸಲಾಗಿರುವ ಸಿಂಡಿಕೇಟ್ ಸಾಮಾನ್ಯ ಸಭೆಯ ಅವಗಾಹನೆಗೆ ಹಾಗೂ ನಿರ್ಣಯಕ್ಕಾಗಿ ಮಂಡಿಸಲಾಗಿದೆ.

## :: ನಿರ್ಣಯ ::

ಜನವರಿ/ ಫೆಬ್ರವರಿ 2025ರಲ್ಲಿ ಪುನರಾವರ್ತಿತ ವಿದ್ಯಾರ್ಥಿಗಳಿಗೆ ದಿನಾಂಕ:17.01.2025 ರಂದು ನಡೆದ B.Sc/ BCA ಪ್ರಥಮ ಸೆಮಿಸ್ಟರ್ ಇಂಗ್ಲೀಷ್ ವಿಷಯದ ಪೇಪರ್–1 Living English ಪರೀಕ್ಷೆಯ ಪ್ರಶ್ನೆ ಪತ್ರಿಕೆಯಲ್ಲಿ 10 ಅಂಕಗಳಿಗೆ Out of Syllabus ಪ್ರಶ್ನೆಗಳು ಇರುವುದು ಖಚಿತವಾಗಿರುವುದರಿಂದ ಈ ಲೋಪಕ್ಕೆ ಪ್ರಶ್ನೆ ಪತ್ರಿಕೆ ಸಿದ್ಧಪಡಿಸಿದವರಿಗೆ ರೂ.25,000/– ಹಾಗೂ ಪರೀಕ್ಷಾ ಮಂಡಳಿಯ ಅಧ್ಯಕ್ಷರನ್ನೊಳಗೊಂಡಂತೆ ಪ್ರತಿ ಸದಸ್ಯರುಗಳಿಗೆ ರೂ.5,000/– ರಂತೆ ದಂಡ ವಿಧಿಸಲು ಸಭೆಯು ತೀರ್ಮಾನಿಸಿತು ಹಾಗೂ ವಿದ್ಯಾರ್ಥಿಗಳ ಭವಿಷ್ಯದ ಹಿತದೃಷ್ಠಿಯಿಂದ 06 ಕೃಪಾಂಕ (Grace Marks) ನೀಡಲು ಸಭೆಯು ಒಮ್ಮತದಿಂದ ನಿರ್ಣಯಿಸಿತು.

ಕುಲಸಚಿವರು

ಕುಲಪತಿಗಳು

| ಮಾ.ಸ.ನಿ. ವಿಭಾಗ – 22 | |
|---|---|
| ವಿಷಯ ಸಂಖ್ಯೆ: | ಸಿಂ.06(a)–(01/25) |

# –: ಟಿಪ್ಪಣಿ :–

ವಿಷಯಃ ಶ್ರೀ ಆರ್.ಎಲ್. ರಂಗಸ್ವಾಮಿ, ಅಧೀಕ್ಷಕರು, ದಾವಣಗೆರೆ ವಿಶ್ವವಿದ್ಯಾನಿಲಯ – ಇವರಿಗೆ ಮುಂಬಡ್ತಿ ನೀಡುವ ಕುರಿತು.

ಉಲ್ಲೇಖ: ಸರ್ಕಾರದ ಪತ್ರ ಸಂಖ್ಯೆ:ಇಆ/18ಯು.ಎನ್.ಇ/2024 ದಿನಾಂಕ:02.02.2024.

*********

ಶ್ರೀ ಆರ್. ಎಲ್ ರಂಗಸ್ವಾಮಿ, ಅಧೀಕ್ಷಕರು, ಅಭಿವೃದ್ಧಿ ವಿಭಾಗ, ದಾವಿವಿ – ಇವರಿಗೆ ಅಧೀಕ್ಷಕರ ಹುದ್ದೆಯಿಂದ ಸಹಾಯಕ ಕುಲಸಚಿವರ ಅಥವಾ ಅದೇ ಸಮಾನವಾದ ಸಹಾಯಕ ನಿರ್ದೇಶಕರ (ಯುಜಿಸಿಯಿಂದ ಮಂಜೂರಾದ) ಹುದ್ದೆಗೆ ಎದುರಾಗಿ ಮುಂಬಡ್ತಿ ನೀಡುವ ಕುರಿತು.

ಶ್ರೀ ಆರ್.ಎಲ್ ರಂಗಸ್ವಾಮಿಯವರಿಗೆ 2017ರ ನಂತರ ಇವರಿಗೆ ಮುಂಬಡ್ತಿ ನೀಡಿರುವುದಿಲ್ಲ. ಸದರಿಯವರು ಯು.ಜಿ.ಸಿಯು ನಿಗಧಿಪಡಿಸಿರುವ ವಿದ್ಯಾರ್ಹತೆ ಹೊಂದಿರುತ್ತಾರೆ(1990 ಎಂ.ಎ., 2009 ಜನವರಿ ಎಂ.ಫಿಲ್) ಹಾಗೆಯೇ ಸದರಿಯವರು ಒಂದೂವರೆ ವರ್ಷದಲ್ಲಿ ನಿವೃತ್ತಿಯಾಗುತ್ತಿದ್ದು, ಜೇಷ್ಠತೆಯಲ್ಲಿ ಹಿರಿಯರಾಗಿರುತ್ತಾರೆ.

ಆದ್ದರಿಂದ, ಸದರಿಯವರಿಗೆ ಸುಮಾರು 07 ವರ್ಷದಿಂದಲೂ ಮುಂಬಡ್ತಿ ನೀಡಿರುವುದಿಲ್ಲ. ಈ ಸಂಬಂಧ ಸದರಿಯವರು ಸರ್ಕಾರಕ್ಕೆ ಮನವಿ ಮಾಡಿಕೊಂಡಿರುತ್ತಾರೆ. ಸದರಿ ಪತ್ರದಲ್ಲಿ ಸಂಖ್ಯೆ:ಇಡಿ18ಯುಎನ್ಇ2024, ದಿನಾಂಕ:02.02.2024ರ ಮಾನ್ಯ ಪ್ರಧಾನ ಕಾರ್ಯದರ್ಶಿಯವರಿಂದ ವಿಶ್ವವಿದ್ಯಾನಿಲಯದ ಹಂತದಲ್ಲಿ ಮುಂಬಡ್ತಿ ನೀಡುವ ಬಗ್ಗೆ ನಿರ್ದೇಶನ ನೀಡಿರುತ್ತಾರೆ. ಸರ್ಕಾರದ ಪತ್ರ ಸಂಖ್ಯೆ:SWD/21/SCP/2024(P-1), ದಿನಾಂಕ:30.09.2024ರ ಸುತ್ತೋಲೆ ಪ್ರಕಾರ ಪ.ಜಾ/ಪ.ಪಂ ನೌಕರರಿಗೆ 05 ವರ್ಷಗಳ ಸೇವೆ ಪರಿಗಣಿಸಿ ಮುಂಬಡ್ತಿ ನೀಡುವಂತೆ ಅಥವಾ ಯಾರು ಸಿಗದಿದ್ದಲ್ಲಿ 03 ವರ್ಷದ ಸೇವೆ ಪರಿಗಣಿಸಿ ಮುಂಬಡ್ತಿ ನೀಡುವಂತೆ ಸುತ್ತೋಲೆಯಲ್ಲಿ ತಿಳಿಸಲಾಗಿರುತ್ತದೆ. ಈ ಎಲ್ಲಾ ಅಂಶಗಳನ್ನು ಗಮನಿಸಿ ವಿಶ್ವವಿದ್ಯಾನಿಲಯದಲ್ಲಿ ಸರ್ಕಾರದ ಆದೇಶದನ್ವಯ ಕ್ರಮ ಜರುಗಿಸಬೇಕಿರುತ್ತದೆ.

ಈ ಹಿನ್ನೆಲೆಯಲ್ಲಿ ಶ್ರೀ ಆರ್.ಎಲ್ ರಂಗಸ್ವಾಮಿ, ಅಧೀಕ್ಷಕರು – ಇವರಿಗೆ **ಯು.ಜಿ.ಸಿಯಿಂದ ಮಂಜೂರಾಗಿರುವ ಒಟ್ಟು 04 ಹುದ್ದೆಗಳಲ್ಲಿ ಹಾಲಿ ಖಾಲಿ ಇರುವ 02 ಹುದ್ದೆಗಳಲ್ಲಿ ಸಹಾಯಕ ಕುಲಸಚಿವರ ಹುದ್ದೆಗೆ ಎದುರಾಗಿ ಸಮಾನವಾಗಿರುವ ಸಹಾಯಕ ನಿರ್ದೇಶಕರ ಹುದ್ದೆಗೆ ಸರ್ಕಾರದಿಂದ ಹುದ್ದೆ ಮಂಜೂರಾಗುವವರೆಗೆ ಅಥವಾ ಹುದ್ದೆ ಪರಿವರ್ತನೆಯಾಗಿ ಬರುವವರೆಗೆ ಹಾಗೂ ಸದರಿಯವರು ನಿವೃತ್ತಿಯಾಗುವವರೆಗೆ ಮಾತ್ರ ಸಹಾಯಕ ನಿರ್ದೇಶಕರ ಹುದ್ದೆಗೆ ಎದುರಾಗಿ ಸಹಾಯಕ ಕುಲಸಚಿವರ ಹುದ್ದೆಯಂತೆ ಪರಿಗಣಿಸಿ ಸದರಿಯವರಿಗೆ ಮುಂಬಡ್ತಿ ನೀಡಲು** ದಿನಾಂಕ:21.01.2025 ರಂದು ಏರ್ಪಡಿಸಲಾಗಿರುವ ಸಿಂಡಿಕೇಟ್ ಸಾಮಾನ್ಯ ಸಭೆಯ ಅವಗಾಹನೆಗೆ ಹಾಗೂ ಅನುಮೋದನೆಗಾಗಿ ಮಂಡಿಸಿದೆ.

:: ನಿರ್ಣಯ ::

ಶ್ರೀ ಆರ್.ಎಲ್ ರಂಗಸ್ವಾಮಿ, ಅಧೀಕ್ಷಕರು – ಇವರಿಗೆ ಯು.ಜಿ.ಸಿಯಿಂದ ಮಂಜೂರಾಗಿರುವ ಒಟ್ಟು 04 ಹುದ್ದೆಗಳಲ್ಲಿ ಹಾಲಿ ಖಾಲಿ ಇರುವ 02 ಹುದ್ದೆಗಳಲ್ಲಿ ಸಹಾಯಕ ಕುಲಸಚಿವರ ಹುದ್ದೆಗೆ ಎದುರಾಗಿ ಸಮಾನವಾಗಿರುವ ಸಹಾಯಕ ನಿರ್ದೇಶಕರ ಹುದ್ದೆಗೆ ಸರ್ಕಾರದಿಂದ ಹುದ್ದೆ ಮಂಜೂರಾಗುವವರೆಗೆ ಅಥವಾ ಹುದ್ದೆ ಪರಿವರ್ತನೆಯಾಗಿ ಬರುವವರೆಗೆ ಹಾಗೂ ಸದರಿಯವರು ನಿವೃತ್ತಿಯಾಗುವವರೆಗೆ ಮಾತ್ರ ಸಹಾಯಕ ನಿರ್ದೇಶಕರ ಹುದ್ದೆಗೆ ಎದುರಾಗಿ ಸಹಾಯಕ ಕುಲಸಚಿವರ ಹುದ್ದೆ ಎಂದು ಪರಿಗಣಿಸಿ ಸದರಿಯವರಿಗೆ ನಿಯಮಾನುಸಾರ DPC ಮೂಲಕ ಮುಂಬಡ್ತಿ ನೀಡಲು ಸಭೆಯು ಒಮ್ಮತದಿಂದ ಅನುಮೋದನೆ ನೀಡಿತು.

ಕುಲಸಚಿವರು

ಕುಲಪತಿಗಳು

| ಮಾ.ಸ.ನಿ. ವಿಭಾಗ – 23 | |
|---|---|
| ವಿಷಯ ಸಂಖ್ಯೆ: | ಸಿಂ.06(b)–(01/25) |

## –: ಟಿಪ್ಪಣಿ :–

ವಿಷಯ: ವಿಶ್ವವಿದ್ಯಾನಿಲಯದ ಯು.ಜಿ.ಸಿ–ಸಿಎಎಸ್ ನಿಯಮದಡಿ ಸಹಾಯಕ ಪ್ರಾಧ್ಯಾಪಕರ ವೃತ್ತಿ ಪದೋನ್ನತಿ (CAS) ನೀಡುವ ಕುರಿತು.

*********

ವಿಶ್ವವಿದ್ಯಾನಿಲಯದ ಸಹ/ಸಹಾಯಕ ಪ್ರಾಧ್ಯಾಪಕರುಗಳ ವೃತ್ತಿ ಪದೋನ್ನತಿಯ ಅರ್ಜಿಗಳನ್ನು ಯು.ಜಿ.ಸಿ – 2018ರ ನಿಯಮಾವಳಿಯಂತೆ ಆಹ್ವಾನಿಸಿದ್ದು, ಅರ್ಜಿಗಳನ್ನು ಪರಿಶೀಲಿಸಿ ಮೌಲ್ಯಮಾಪನ ನಡೆಸಿ ಎ.ಜಿ.ಪಿ ಮಂಜೂರಾತಿ ಮಾಡಲು ಬಾಹ್ಯ ವಿಷಯ ತಜ್ಞರುಗಳು ದಿನಾಂಕ:30.12.2024 ಹಾಗೂ 15.01.2025 ರಂದು ಮೌಲ್ಯಮಾಪನ ಮತ್ತು ಸಂದರ್ಶನ ನಡೆಸಿ ವರದಿಯನ್ನು ನೀಡಿರುತ್ತಾರೆ.(ಅನುಬಂಧ–1)

ದಿನಾಂಕ:30.12.2024 ಹಾಗೂ 15.01.2025 ರಂದು ನಡೆದ ಸಭೆಯ ನಡಾವಳಿಯಲ್ಲಿ ದಾವಣಗೆರೆ ವಿಶ್ವವಿದ್ಯಾನಿಲಯದ ಸಹಾಯಕ ಪ್ರಾಧ್ಯಾಪಕ ಹುದ್ದೆಯ Academic Level 10 ರಿಂದ Academic Level 11 ಹಾಗೂ ಪ್ರಾಧ್ಯಾಪಕರ ಹುದ್ದೆಯ Academic Level 13(ಎ) ರಿಂದ Academic Level 14ಕ್ಕೆ ವೃತ್ತಿ ಪದೋನ್ನತಿ ನೀಡಬಹುದೆಂದು ಅಭಿಪ್ರಾಯಿಸಿರುವುದನ್ನು ದಿನಾಂಕ:21.01.2025 ರಂದು ಏರ್ಪಡಿಸಲಾಗಿರುವ ಸಿಂಡಿಕೇಟ್ ಅಸಾಮಾನ್ಯ ಸಭೆಯ ಅವಗಾಹನೆಗೆ ಹಾಗೂ ಅನುಮೋದನೆಗಾಗಿ ಸಲ್ಲಿಸಿದೆ.

| UGC CAS 2023 Scrutiny Completed Candidate Details | | | | |
|---|---|---|---|---|
| **Professor (Level 13 A to Level 14)** | | | | |
| **Sl No.** | **Date** | **Name** | **Department** | **Designation** |
| 01 | 01.06.2022 | Dr. K.M. Eshwarappa | Physics | Professor |
| 02 | 24.09.2024 | Dr. Kotresha D | Botany | Professor |
| 03 | 30.10.2024 | Dr. Ashok Kumar V. Paled | Political Science | Professor |
| 04 | 22.11.2024 | Dr. Niranjan M.H. | Biotechnology | Professor |
| 05 | 30.08.2019 | Dr. Pradeep B.S. | MSW | Associate Professor |
| 06 | 17.06.2024 | | | Professor |
| **Assistant Professor (Level 10 to Level 11)** | | | | |
| 01 | 08.03.2024 | Dr. Yagnasri S. | English | Assistant Professor |
| 02 | 18.07.2024 | Mr. Madakari Nayaka H.R. | | Assistant Professor |
| 03 | 30.07.2024 | Dr. Fakkiresh Hallalli | | Assistant Professor |
| 04 | 24.03.2023 | Dr. Chandralekha J.S. | Journalism | Assistant Professor |
| 05 | 01.09.2023 | Dr. Girish D.H. | Economics | Assistant Professor |
| 06 | 01.03.2024 | Dr. Sundram M. | | Assistant Professor |
| 07 | 30.07.2024 | Dr. Usha | Commerce | Assistant Professor |
| 08 | 06.03.2024 | Dr. Chetan Kumar K.M. | Education | Assistant Professor |
| 09 | 14.08.2024 | Dr. Anup Ritti | Computer Science | Assistant Professor |

### :: ನಿರ್ಣಯ ::

ವಿಶ್ವವಿದ್ಯಾನಿಲಯದ ಸಹ/ಸಹಾಯಕ ಪ್ರಾಧ್ಯಾಪಕರುಗಳ ವೃತ್ತಿ ಪದೋನ್ನತಿಯ ಅರ್ಜಿಗಳನ್ನು ಯು.ಜಿ.ಸಿ – 2018ರ ನಿಯಮಾವಳಿಯಂತೆ ಆಹ್ವಾನಿಸಿ, ಅರ್ಜಿಗಳನ್ನು ಪರಿಶೀಲಿಸಿ ಮೌಲ್ಯಮಾಪನ ನಡೆಸಿ ಎ.ಜಿ.ಪಿ ಮಂಜೂರಾತಿ ಮಾಡಲು ಬಾಹ್ಯ ವಿಷಯ ತಜ್ಞರುಗಳು ದಿನಾಂಕ:30.12.2024 ಹಾಗೂ 15.01.2025 ರಂದು ಮೌಲ್ಯಮಾಪನ ಮತ್ತು ಸಂದರ್ಶನ ನಡೆಸಿ ವರದಿಯನ್ನು ಹಾಗೂ ದಿನಾಂಕ:30.12.2024 ಹಾಗೂ 15.01.2025 ರಂದು ನಡೆದ ಸಭೆಯ ನಡಾವಳಿಯಲ್ಲಿ ವಿಶ್ವವಿದ್ಯಾನಿಲಯದ ಸಹಾಯಕ ಪ್ರಾಧ್ಯಾಪಕ ಹುದ್ದೆಯ Academic Level 10 ರಿಂದ Academic Level 11 ಹಾಗೂ ಪ್ರಾಧ್ಯಾಪಕರ ಹುದ್ದೆಯ Academic Level 13(ಎ) ರಿಂದ Academic Level 14ಕ್ಕೆ ವೃತ್ತಿ ಪದೋನ್ನತಿ ನೀಡುವ ಕುರಿತಂತೆ Excel Sheet ನಲ್ಲಿ ದಾಖಲಾತಿಗಳನ್ನು ತಯಾರಿಸಿ ಪರಿಶೀಲಿಸಿದ ನಂತರ ಕ್ರಮಕೈಗೊಳ್ಳಲು ಸಭೆಯು ಒಮ್ಮತದಿಂದ ನಿರ್ಣಯಿಸಿತು.

ಕುಲಸಚಿವರು ಕುಲಪತಿಗಳು

| ಹಣಕಾಸು ವಿಭಾಗ – 24 | |
|---|---|
| ವಿಷಯ ಸಂಖ್ಯೆ: | ಸಿಂ.07(a)–(01/25) |

## –: ಟಿಪ್ಪಣಿ :–

**ವಿಷಯ:** **Union Bank of India ಬ್ಯಾಂಕ್‌ನಲ್ಲಿ ZBSA (Zero Balance Subsidiary Account) ಖಾತೆ ತೆರೆಯುವ ಕುರಿತು.**

ಉಲ್ಲೇಖ: ವಿಜ್ಞಾನ ಮತ್ತು ತಂತ್ರಜ್ಞಾನ ಸಚಿವಾಲಯ, ಭಾರತ ಸರ್ಕಾರ – ಇವರಪತ್ರಸಂಖ್ಯೆ:DST/INSPIRE/MISC/2024-25 Date:19.12.2024)

*********

ವಿಜ್ಞಾನ ಮತ್ತು ತಂತ್ರಜ್ಞಾನ ಸಂಸ್ಥೆ, ನವದೆಹಲಿ – ಇವರು

1. Science and Technology institutionl nd Human capacity building (1817)
2. Research and Develpoment (3237)
3. Innovation Technology Development and Deployment (1819)

ಈ ಮೇಲ್ಕಂಡ ಮೂರು ಸ್ಕೀಮ್‌ಗಳನ್ನು ವಿಲೀನಗೊಳಿಸಿ **"ವಿಜ್ಞಾನ ಧಾರ"** ಯೋಜನೆಯಡಿಯಲ್ಲಿ ವಿದ್ಯಾರ್ಥಿಗಳಿಗೆ DST Inspire Fellowship ಅಡಿಯಲ್ಲಿ ಮಂಜೂರಾಗುವ ಅನುದಾನವನ್ನು Hybrid TSA ಮಾದರಿಯಲ್ಲಿ ವರ್ಗಾವಣೆ ಮಾಡಲು ವಿಶ್ವವಿದ್ಯಾನಿಲಯವು ಪ್ರತ್ಯೇಕವಾಗಿ Union Bank of India ನಲ್ಲಿ ಹೊಸ ZBSA (Zero Balance Subsidiary Account) ಖಾತೆ ತೆರೆಯುವಂತೆ – ವಿಜ್ಞಾನ ಮತ್ತು ತಂತ್ರಜ್ಞಾನ ಸಚಿವಾಲಯ, ವಿಜ್ಞಾನ ಮತ್ತು ತಂತ್ರಜ್ಞಾನ ಇಲಾಖೆ, ಭಾರತ ಸರ್ಕಾರ, ನವದೆಹಲಿ – ಇವರು ಉಲ್ಲೇಖಿತ ಪತ್ರದಲ್ಲಿ ತಿಳಿಸಿರುತ್ತಾರೆ.

ಈ ಹಿನ್ನೆಲೆಯಲ್ಲಿ, ವಿಶ್ವವಿದ್ಯಾನಿಲಯದ ಸಂಶೋಧನಾ ವಿದ್ಯಾರ್ಥಿಗಳು DST Inspire Fellowship ಗೆ ಆಯ್ಕೆಯಾಗಿದ್ದು, ಸದರಿ Fellowship ಪಡೆಯಲು ವಿಶ್ವವಿದ್ಯಾನಿಲಯವು Union Bank of India ನಲ್ಲಿ **"ದಾವಣಗೆರೆ ವಿಶ್ವವಿದ್ಯಾನಿಲಯ"ದ** ಹೆಸರಿನಲ್ಲಿ ಹೊಸ ZBSA ಖಾತೆಯನ್ನು ತೆರೆಯುವಂತೆ ವಿದ್ಯಾರ್ಥಿಗಳು ಮನವಿ ಮಾಡಿಕೊಂಡಿರುವ ಹಿನ್ನೆಲೆಯಲ್ಲಿ ಹಾಗೂ ಕರ್ನಾಟಕ ಸರ್ಕಾರದ ಆದೇಶ ಸಂಖ್ಯೆ:ಎಫ್.ಡಿ.ಎಸ್/ಟಿ.ಎ.ಆರ್/2012 ದಿನಾಂಕ:30.07.2017 ರ ಮಾರ್ಗಸೂಚಿಯಂತೆ ಸದರಿ ವಿಷಯವನ್ನು ದಿನಾಂಕ:21.01.2025 ರಂದು ಏರ್ಪಡಿಸಲಾಗಿರುವ ಸಿಂಡಿಕೇಟ್ ಸಾಮಾನ್ಯ ಸಭೆಯ ಅವಗಾಹನೆಗೆ ಹಾಗೂ ಅನುಮೋದನೆಗಾಗಿ ಮಂಡಿಸಿದೆ.

### :: ನಿರ್ಣಯ ::

ಕೇಂದ್ರ ಸರ್ಕಾರದ "ವಿಜ್ಞಾನ ಧಾರ" ಯೋಜನೆಯಡಿಯಲ್ಲಿ – ವಿದ್ಯಾರ್ಥಿಗಳಿಗೆ DST Inspire Fellowship ಅಡಿಯಲ್ಲಿ ಮಂಜೂರಾಗುವ ಅನುದಾನವನ್ನು Hybrid TSA ಮಾದರಿಯಲ್ಲಿ ವರ್ಗಾವಣೆ ಮಾಡಲು ಅನುಕೂಲವಾಗುವಂತೆ ವಿಶ್ವವಿದ್ಯಾನಿಲಯವು ಪ್ರತ್ಯೇಕವಾಗಿ Union Bank of India ನಲ್ಲಿ "ದಾವಣಗೆರೆ ವಿಶ್ವವಿದ್ಯಾನಿಲಯ"ದ ಹೆಸರಿನಲ್ಲಿ ಹೊಸ ZBSA ಖಾತೆಯನ್ನು ತೆರೆಯುಲು ಸಭೆಯು ಒಮ್ಮತದಿಂದ ಅನುಮೋದನೆ ನೀಡಿತು.

ಕುಲಸಚಿವರು

ಕುಲಪತಿಗಳು

| ಹಣಕಾಸು ವಿಭಾಗ – 25 | |
|---|---|
| ವಿಷಯ ಸಂಖ್ಯೆ: | ಸಿಂ.07(b)–(01/25) |

## –: ಟಿಪ್ಪಣಿ :–

ವಿಷಯ: ವಿಶ್ವವಿದ್ಯಾನಿಲಯದಿಂದ ಬಾಕಿ ಇರುವ **ರೂ.27,64,427/– ಲೆಕ್ಕಪರಿಶೋಧನಾ ಶುಲ್ಕವನ್ನು ಸರ್ಕಾರದ ಲೆಕ್ಕ ಶೀರ್ಷಿಕೆಗೆ ಜಮಾ ಮಾಡಲು ಅನುಮೋದನೆ ಕುರಿತು.**

ಉಲ್ಲೇಖ: ಅಪರ ನಿರ್ದೇಶಕರು, ಬೆಂಗಳೂರು ಪ್ರಾಂತೀಯ ಕಛೇರಿ, ಕರ್ನಾಟಕ ರಾಜ್ಯ ಲೆಕ್ಕಪರಿಶೋಧನೆ ಮತ್ತು ಲೆಕ್ಕ ಪತ್ರ ಇಲಾಖೆ, ಬೆಂಗಳೂರು ಇವರ ಪತ್ರ ಸಂಖ್ಯೆ:ಬೆಂಪ್ರಾಕ/ಸಿ–1/ಲೆ.ತ.ಶು/2022–23/524 ದಿನಾಂಕ:28.11.2024

*********

ಕರ್ನಾಟಕ ರಾಜ್ಯ ಲೆಕ್ಕಪರಿಶೋಧನೆ ಮತ್ತು ಲೆಕ್ಕಪತ್ರ ಇಲಾಖೆಯು ದಾವಣಗೆರೆ ವಿಶ್ವವಿದ್ಯಾನಿಲಯದ ಲೆಕ್ಕಪರಿಶೋಧನೆಯನ್ನು ಕೈಗೊಳ್ಳುವ ಶಾಸನಬದ್ಧ ಇಲಾಖೆಯಾಗಿದ್ದು, ವಿಶ್ವವಿದ್ಯಾನಿಲಯದ ಲೆಕ್ಕಪರಿಶೋಧನಾ ಶುಲ್ಕವು ರೂ.27,64,427/– ಪಾವತಿಗಾಗಿ ಬಾಕಿ ಇರುತ್ತದೆ. ಸದರಿ ಲೆಕ್ಕಪರಿಶೋಧನಾ ಶುಲ್ಕವನ್ನು ಸರ್ಕಾರದ ಲೆಕ್ಕ ಶೀರ್ಷಿಕೆ 0070–60–110–0–01–000 (DDO Code-333570) ಗೆ ಜಮಾ ಮಾಡಬೇಕಾಗಿರುತ್ತದೆ.

ತತ್ಸಂಬಂಧವಾಗಿ, ಈ ವಿಷಯವನ್ನು ದಿನಾಂಕ:21.01.2025 ರಂದು ಏರ್ಪಡಿಸಲಾಗಿರುವ ಸಿಂಡಿಕೇಟ್ ಸಾಮಾನ್ಯ ಸಭೆಯ ಅವಗಾಹನೆಗೆ ಹಾಗೂ ಅನುಮೋದನೆಗಾಗಿ ಮಂಡಿಸಿದೆ.

### :: ನಿರ್ಣಯ ::

ಕರ್ನಾಟಕ ರಾಜ್ಯ ಲೆಕ್ಕಪರಿಶೋಧನೆ ಮತ್ತು ಲೆಕ್ಕಪತ್ರ ಇಲಾಖೆಗೆ – ದಾವಣಗೆರೆ ವಿಶ್ವವಿದ್ಯಾನಿಲಯವು ಪಾವತಿಸಬೇಕಾದ ಲೆಕ್ಕಪರಿಶೋಧನಾ ಬಾಕಿ ಶುಲ್ಕ ರೂ.27,64,427/– ಗಳಲ್ಲಿ 2024–25 ನೇ ಸಾಲಿನಲ್ಲಿ 50% ಮೊತ್ತವನ್ನು ಹಾಗೂ 2025–26ನೇ ಸಾಲಿನಲ್ಲಿ 50% ಮೊತ್ತವನ್ನು ಸರ್ಕಾರದ ಲೆಕ್ಕ ಶೀರ್ಷಿಕೆ 0070–60–110–0–01–000 (DDO Code-333570) ಗೆ ಜಮಾ ಮಾಡಲು ಸಭೆಯು ಒಮ್ಮತದಿಂದ ಅನುಮೋದಿಸಿತು.

ಕುಲಸಚಿವರು | ಕುಲಪತಿಗಳು

| ಅಭಿವೃದ್ಧಿ ವಿಭಾಗ – 26 | |
|---|---|
| ವಿಷಯ ಸಂಖ್ಯೆ: | ಸಿಂ.8(a)–(01/25) |

## –: ಟಿಪ್ಪಣಿ :–

**ವಿಷಯಃ ಅಖಿಲ ಭಾರತ ವಿಶ್ವವಿದ್ಯಾನಿಲಯಗಳ ಒಕ್ಕೂಟ, ನವದೆಹಲಿ ಇವರಿಗೆ ಪಾಲುದಾರಿಕೆ ನೋಂದಣಿ ಶುಲ್ಕ ಪಾವತಿಸಲು ದರ ನಿಗದಿಪಡಿಸುವ ಕುರಿತು.**

*********

ಪ್ರಧಾನ ಕಾರ್ಯದರ್ಶಿಗಳು, Association of Indian Universities (AIU) - New Delhi - ಇವರಿಗೆ ಪ್ರತಿವರ್ಷ ವಾರ್ಷಿಕ ನೋಂದಣಿ ಶುಲ್ಕ 60,000/– ಗಳನ್ನು ಸಂದಾಯ ಮಾಡಿಕೊಂಡು ಬಂದಿರುತ್ತೇವೆ. ದಿನಾಂಕ:07.10.2024 ರಂದು ಪ್ರಧಾನ ಕಾರ್ಯದರ್ಶಿಗಳು, ಬರೆದಿರುವ ಪತ್ರದಲ್ಲಿ ಎಲ್ಲಾ ವಿಶ್ವವಿದ್ಯಾನಿಲಯಗಳು ಪಾಲುದಾರಿಕೆಯಲ್ಲಿ ಪಾಲ್ಗೊಂಡು ನಿಗದಿಪಡಿಸಿದ ದರದಂತೆ ಧನಾದೇಶ ಪಾವತಿಸುವ ಬಗ್ಗೆ ತಿಳಿಸಿರುತ್ತಾರೆ.

ಆದ್ದರಿಂದ, ಪ್ರಧಾನ ಕಾರ್ಯದರ್ಶಿ Association of Indian Universities (AIU) - New Delhi - ರವರು ಬರೆದಿರುವ ಪತ್ರದಲ್ಲಿ ದರಗಳನ್ನು ನಮೂದಿಸಿ ಒಕ್ಕೂಟಕ್ಕೆ ಪಾಲುದಾರಿಕೆ ನೋಂದಣಿ ಮಾಡುವ ಕುರಿತು ದಿನಾಂಕ:21.01.2025 ರಂದು ಏರ್ಪಡಿಸಲಾಗಿರುವ ಸಿಂಡಿಕೇಟ್ ಸಾಮಾನ್ಯ ಸಭೆಯ ಅವಗಾಹನೆಗೆ ಹಾಗೂ ಅನುಮೋದನೆಗಾಗಿ ಮಂಡಿಸಿದೆ.

### :: ನಿರ್ಣಯ ::

Association of Indian Universities (AIU) - New Delhi - ಸಂಸ್ಥೆಯು ಆಚರಿಸಿಕೊಳ್ಳುತ್ತಿರುವ ಶತಮಾನೋತ್ಸವ ಕಾರ್ಯಕ್ರಮಕ್ಕೆ ನಮ್ಮ ವಿಶ್ವವಿದ್ಯಾನಿಲಯದಿಂದ ಒಕ್ಕೂಟ ಪಾಲುದಾರಿಕೆ ನೋಂದಣಿಗೆ ಪ್ರಸ್ತುತ ವರ್ಷದಲ್ಲಿ ರೂ.3.00 ಲಕ್ಷಗಳನ್ನು Association of Indian Universities (AIU) - ಇವರಿಗೆ ಪಾವತಿಸಲು ಸಭೆಯು ಒಮ್ಮತದಿಂದ ಅನುಮೋದಿಸಿತು.

ಕುಲಸಚಿವರು

ಕುಲಪತಿಗಳು

| ಅಭಿವೃದ್ಧಿ ವಿಭಾಗ - 27 | |
|---|---|
| ವಿಷಯ ಸಂಖ್ಯೆ: | ಸಿಂ.8(b)-(01/25) |

## -: ಟಿಪ್ಪಣಿ :-

ವಿಷಯ: ವಿಶ್ವವಿದ್ಯಾನಿಲಯಕ್ಕೆ ಅವಶ್ಯವಿರುವ ಲೇಖನಾ ಸಾಮಗ್ರಿ ಹಾಗೂ ಸ್ವಚ್ಛತಾ ಸಾಮಗ್ರಿಗಳ ಖರೀದಿಗೆ ಟೆಂಡರ್ ಆಹ್ವಾನಿಸಿರುವುದಕ್ಕೆ ಅನುಮೋದನೆ ನೀಡುವ ಕುರಿತು.

*********

ಮಾನ್ಯ ಕುಲಪತಿಗಳ ಆದೇಶಾನುಸಾರ ವಿಶ್ವವಿದ್ಯಾನಿಲಯದ ಆಡಳಿತ ವಿಭಾಗದ ಕಛೇರಿಗಳಿಗೆ, ವಿವಿಧ ಸ್ನಾತಕೋತ್ತರ ಅಧ್ಯಯನ ವಿಭಾಗಗಳಿಗೆ ಹಾಗೂ ಸ್ನಾತಕೋತ್ತರ ಕೇಂದ್ರ ಚಿತ್ರದುರ್ಗ ಹಾಗೂ ದೃಶ್ಯಕಲಾ ಮಹಾವಿದ್ಯಾಲಯಕ್ಕೆ ಅವಶ್ಯವಿರುವ ಲೇಖನಾ ಸಾಮಗ್ರಿ ರೂ.15,00,000=00 ಮತ್ತು ಸ್ವಚ್ಛತಾ ಸಾಮಗ್ರಿ ರೂ.10,00,000=00 ಗಳಿಗೆ ಒಟ್ಟು ರೂ.25,00,000=00 ಗಳ ಟೆಂಡರ್ ಆಹ್ವಾನಿಸಿರುವ ಸಂಬಂಧ ದಿನಾಂಕ:21.01.2025 ರಂದು ಏರ್ಪಡಿಸಲಾಗಿರುವ ಸಿಂಡಿಕೇಟ್ ಸಾಮಾನ್ಯ ಸಭೆಯ ಅವಗಾಹನೆಗೆ ಹಾಗೂ ಅನುಮೋದನೆಗಾಗಿ ಮಂಡಿಸಿದೆ.

### :: ನಿರ್ಣಯ ::

ವಿಶ್ವವಿದ್ಯಾನಿಲಯದ ಆಡಳಿತ ವಿಭಾಗದ ಕಛೇರಿಗಳಿಗೆ, ವಿವಿಧ ಸ್ನಾತಕೋತ್ತರ ಅಧ್ಯಯನ ವಿಭಾಗಗಳಿಗೆ ಹಾಗೂ ಸ್ನಾತಕೋತ್ತರ ಕೇಂದ್ರ ಚಿತ್ರದುರ್ಗ ಹಾಗೂ ದೃಶ್ಯಕಲಾ ಮಹಾವಿದ್ಯಾಲಯಕ್ಕೆ ಅವಶ್ಯವಿರುವ ಲೇಖನಾ ಸಾಮಗ್ರಿ ರೂ.15,00,000=00 ಮತ್ತು ಸ್ವಚ್ಛತಾ ಸಾಮಗ್ರಿ ರೂ.10,00,000=00 ಗಳಿಗೆ ಒಟ್ಟು ರೂ.25,00,000=00 ಗಳ ಟೆಂಡರ್‌ಗಳನ್ನು ಬೇರೆ ಬೇರೆಯಾಗಿ ಆಹ್ವಾನಿಸಲು ಸಭೆಯು ಒಮ್ಮತದಿಂದ ಅನುಮೋದಿಸಿತು.

ಕುಲಸಚಿವರು

ಕುಲಪತಿಗಳು

| ಕಾಲೇಜು ಅಭಿವೃದ್ಧಿ ಪರಿಷತ್ತು – 28 | |
| --- | --- |
| ವಿಷಯ ಸಂಖ್ಯೆ: | ಸಿಂ.9(a)–(01/25) |

## –: ಟಿಪ್ಪಣಿ :–

**ವಿಷಯ:** **2025–26ನೇ ಶೈಕ್ಷಣಿಕ ಸಾಲಿನ ಕಾಲೇಜುಗಳ ಸಂಯೋಜನಾ ಕಾರ್ಯವನ್ನು ಸ್ಥಳೀಯ ತಪಾಸಣಾ ಸಮಿತಿಗಳು ಶಿಫಾರಸ್ಸು ಮಾಡಿ ನೀಡಿರುವ ಪರಿಶೀಲನಾ ವರದಿಗಳನ್ನು ಸರ್ಕಾರಕ್ಕೆ ಸಲ್ಲಿಸುವ ಕುರಿತು.**

1. ಸರ್ಕಾರದ ಆದೇಶ ಸಂಖ್ಯೆ:ಇಡಿ 166ಯುಎನ್‌ಇ 2023, ದಿನಾಂಕ:04.10.2024.
2. ವಿಶ್ವವಿದ್ಯಾನಿಲಯದ ಅಧಿಸೂಚನೆ ಪ್ರಕಟಣೆ ಸಂಖ್ಯೆ:ದಾವಿವಿ/ಸಿಡಿಸಿ/ಸಂಯೋ–149/2024–25/2598 ದಿನಾಂಕ:22.10.2024

****

ಉಲ್ಲೇಖಿತ (1)ರ ಸರ್ಕಾರದ ಆದೇಶಾನುಸಾರ ಹಾಗೂ ಮಾನ್ಯ ಕುಲಪತಿಗಳ ಅನುಮೋದನೆ ಮೇರೆಗೆ, ಕರ್ನಾಟಕ ವಿಶ್ವವಿದ್ಯಾನಿಲಯಗಳ ಕಾಯ್ದೆ, 2000, ಸೆಕ್ಷನ್ (59) (03)ರನ್ವಯ, ವಿಶ್ವವಿದ್ಯಾನಿಲಯಸ ಸಂಲಗ್ನಗೊಂಡ ಕಾಲೇಜುಗಳ 2025–26ನೇ ಶೈಕ್ಷಣಿಕ ಸಾಲಿನ ಸಂಯೋಜನೆ ಸಂಬಂಧ, ನವೀನ ಕಾಲೇಜುಗಳ ಸಂಯೋಜನೆ, ಕಾಲೇಜುಗಳ ಮುಂದುವರಿಕೆ ಸಂಯೋಜನೆ/ನವೀನ ಶಾಶ್ವತ ಸಂಯೋಜನೆ/ಶಾಶ್ವತ ಸಂಯೋಜನೆ ಪರಿವೀಕ್ಷಣೆ/ಶಾಶ್ವತ ಸಂಯೋಜನೆ ನವೀಕರಣ/ವಿದ್ಯಾರ್ಥಿ ಪ್ರವೇಶ ಮಿತಿ ಹೆಚ್ಚಳ/ನವೀನ ಕೋರ್ಸು/ನವೀನ ಐಚ್ಛಿಕ ವಿಷಯ ಇತ್ಯಾದಿಗಳ ಅರ್ಜಿಗಳನ್ನು ಉಲ್ಲೇಖಿತ (2)ರ ಪತ್ರದಲ್ಲಿ ಆಹ್ವಾನಿಸಲಾಗಿತ್ತು. ಈ ಸಂಬಂಧವಾಗಿ, ವಿಶ್ವವಿದ್ಯಾನಿಲಯದ ಸಂಲಗ್ನಗೊಂಡ ಕಾಲೇಜುಗಳ ಪ್ರಾಂಶುಪಾಲರು/ಆಡಳಿತ ಮಂಡಳಿಯವರು ತಮ್ಮ ಕಾಲೇಜಿನ 2025–26ನೇ ಸಾಲಿನ ಮುಂದುವರಿಕೆ/ನವೀನ ಸಂಯೋಜನೆಗಾಗಿ ಸಂಯೋಜನಾ ಅರ್ಜಿಗಳನ್ನು ವಿಶ್ವವಿದ್ಯಾನಿಲಯಕ್ಕೆ ಸಲ್ಲಿಸಿರುತ್ತಾರೆ.

ಕರ್ನಾಟಕ ವಿಶ್ವವಿದ್ಯಾನಿಲಯಗಳ ಕಾಯ್ದೆ, 2000, ಸೆಕ್ಷನ್ (59)(06) ರನ್ವಯ, ಸದರಿ ಅರ್ಜಿಗಳ ಪರಿಶೀಲನಾ ಕಾರ್ಯಗಳಿಗಾಗಿ ಕಾಲೇಜುಗಳ ಭೌತಿಕ ಪರಿಶೀಲನೆ ನಡೆಸಲು ವಿಶ್ವವಿದ್ಯಾನಿಲಯದ ಸ್ಥಳೀಯ ಪರಿಶೀಲನಾ ಸಮಿತಿಗಳನ್ನು ರಚಿಸಲಾಗಿತ್ತು. ಸದರಿ ಸಮಿತಿಗಳು ಕಾಲೇಜುಗಳಿಗೆ ಭೇಟಿ ನೀಡಿ ಸಂಯೋಜನಾ ಶಿಫಾರಸ್ಸು ವರದಿಗಳನ್ನು ಸಲ್ಲಿಸಿರುತ್ತವೆ. ಆದ್ದರಿಂದ, ಸರ್ಕಾರದ ನಿರ್ದೇಶಾನುಸಾರ ಹಾಗೂ ಕರ್ನಾಟಕ ವಿಶ್ವವಿದ್ಯಾನಿಲಯಗಳ ಕಾಯ್ದೆ, 2000, ಸೆಕ್ಷನ್ (59) (10) ರನ್ವಯ, ಹೊಸ ಕಾಲೇಜು, ಹೊಸ ಕೋರ್ಸು/ಐಚ್ಛಿಕ ವಿಷಯ, ಶಾಶ್ವತ ಸಂಯೋಜನೆ, ಶಾಶ್ವತ ಸಂಯೋಜನೆ ನವೀಕರಣಗಳಿಗೆ ಕೋರಿ ಸಲ್ಲಿಸಿರುವ ಪ್ರಸ್ತಾವನೆಗಳನ್ನು ಸರ್ಕಾರಕ್ಕೆ ಸಲ್ಲಿಸಬೇಕಾಗಿರುತ್ತದೆ. ಉಳಿದಂತೆ, ಮುಂದುವರಿಕೆ ಸಂಯೋಜನೆಗೆ ಕೋರಿ ಸಲ್ಲಿಸಿರುವ ಪ್ರಸ್ತಾವನೆಗಳನ್ನು ವಿಶ್ವವಿದ್ಯಾನಿಲಯದ ಹಂತದಲ್ಲಿ ಅನುಮೋದಿಸಬೇಕಾಗಿರುತ್ತದೆ.

ತತ್ಸಂಬಂಧ, ಈ ಮೇಲ್ಕಂಡ ಮಾಹಿತಿ/ವಿವರಗಳನ್ನು ದಿನಾಂಕ:21.01.2025ರಂದು ಏರ್ಪಡಿಸಲಾಗುವ ವಿಶ್ವವಿದ್ಯಾನಿಲಯದ ಸಿಂಡಿಕೇಟ್ ಸಾಮಾನ್ಯ ಸಭೆಯ ಅವಗಾಹನೆಗೆ ಹಾಗೂ ಅನುಮೋದನೆಗಾಗಿ ಮಂಡಿಸಲಾಗಿದೆ.

### :: ನಿರ್ಣಯ ::

ಸರ್ಕಾರದ ನಿರ್ದೇಶಾನುಸಾರ ಹಾಗೂ ಕರ್ನಾಟಕ ವಿಶ್ವವಿದ್ಯಾನಿಲಯಗಳ ಕಾಯ್ದೆ, 2000, ಸೆಕ್ಷನ್ (59) (10) ರನ್ವಯ 2025–26ನೇ ಶೈಕ್ಷಣಿಕ ಸಾಲಿನ – ಕಾಲೇಜುಗಳ ಸಂಯೋಜನಾ ಕಾರ್ಯವನ್ನು ಸ್ಥಳೀಯ ತಪಾಸಣಾ ಸಮಿತಿಗಳು ಶಿಫಾರಸ್ಸು ಮಾಡಿ ನೀಡಿರುವ ಪರಿಶೀಲನಾ ವರದಿಗಳನ್ನು ಸರ್ಕಾರಕ್ಕೆ ಸಲ್ಲಿಸಲು ಸಭೆಯು ನಿರ್ಣಯಿಸಿತು. ಮುಂದುವರೆದು, 2025–26ನೇ ಶೈಕ್ಷಣಿಕ ಸಾಲಿನ ಮುಂದುವರಿಕೆ ಸಂಯೋಜನೆಗೆ ಕೋರಿ ಸಲ್ಲಿಸಿರುವ ಕಾಲೇಜುಗಳ ಪ್ರಸ್ತಾವನೆಗಳನ್ನು ಸಭೆಯು ಒಮ್ಮತದಿಂದ ಅನುಮೋದಿಸಿತು.

ಕುಲಸಚಿವರು　　　　　　　　　　ಕುಲಪತಿಗಳು

| ಪ್ರಾಧಿಕಾರಗಳ ವಿಭಾಗ – 29 | |
|---|---|
| ವಿಷಯ ಸಂಖ್ಯೆ: | ಸಿಂ.01(e)–(01/25) |

## –: ಟಿಪ್ಪಣಿ :–

ವಿಷಯಃ ಶ್ರೀಮತಿ ಶಾರದಾ ಪಾಟೀಲ, ಮಾನ್ಯ ಸಿಂಡಿಕೇಟ್ ಸದಸ್ಯರು ಇವರ ಪ್ರಸ್ತಾವನೆ ಕುರಿತು.

*********

ಶ್ರೀಮತಿ ಶಾರದಾ ಪಾಟೀಲ, ಮಾನ್ಯ ಸಿಂಡಿಕೇಟ್ ಸದಸ್ಯರು – ಇವರು ಈ ಕೆಳಕಂಡಂತೆ ಪ್ರಸ್ತಾವನೆಯನ್ನು ಸಲ್ಲಿಸಿರುತ್ತಾರೆ. ಸದರಿ ವಿಷಯವನ್ನು ದಿನಾಂಕ:21.01.2025 ರಂದು ಏರ್ಪಡಿಸಲಾಗಿರುವ ಸಿಂಡಿಕೇಟ್ ಸಾಮಾನ್ಯ ಸಭೆಯ ಅವಗಾಹನೆಗೆ ಹಾಗೂ ಅನುಮೋದನೆಗಾಗಿ ಮಂಡಿಸಿದೆ.

| | |
|---|---|
| ವಿಷಯ–1 | ದಾವಣಗೆರೆ ವಿಶ್ವವಿದ್ಯಾನಿಲಯದ ಅಡಿಯಲ್ಲಿ ಕಾರ್ಯನಿರ್ವಹಿಸುತ್ತಿರುವ ಅತಿಥಿ ಉಪನ್ಯಾಸಕರುಗಳಿಗೆ ಆಗುತ್ತಿರುವ ತಾರತಮ್ಯವನ್ನು ಸರಿಪಡಿಸುವ ಕುರಿತು. |
| ನಿರ್ಣಯ : | ಮಾರ್ಚ್–2025ರ ಮಾಹೆಯಲ್ಲಿ ಅತಿಥಿ ಉಪನ್ಯಾಸಕರ ವೇತನಕ್ಕೆ ಸಂಬಂಧಿಸಿದಂತೆ ಸಿಂಡಿಕೇಟ್ ಸದಸ್ಯರನ್ನೊಳಗೊಂಡಂತೆ ಉಪಸಮಿತಿಯನ್ನು ರಚಿಸಿ ಸಭೆಯ ನಿರ್ಣಯದನುಸಾರ ಕ್ರಮಕೈಗೊಳ್ಳಲು ಸಭೆಯು ನಿರ್ಣಯಿಸಿತು. |
| ವಿಷಯ–2 | Non-CBCS ಹಳೆಯ ವಿದ್ಯಾರ್ಥಿಗಳಿಗೆ Double the Duration ಅಡಿಯಲ್ಲಿ ಪರೀಕ್ಷೆ ತೆಗೆದುಕೊಳ್ಳಲು ಅನುಮತಿ ನೀಡುವ ಕುರಿತು. |
| ನಿರ್ಣಯ : | Double the Durationಗೆ ಸಂಬಂಧಿಸಿದಂತೆ ವಿದ್ಯಾರ್ಥಿಗಳಿಂದ ಸ್ವೀಕೃತಗೊಳ್ಳುವ ಅರ್ಜಿಗಳನ್ನು ಪರಿಗಣಿಸಿ ಏಪ್ರಿಲ್/ಮೇ–2025 ರಲ್ಲಿ ವಿದ್ಯಾರ್ಥಿಗಳ ಸಂಖ್ಯೆಗನುಗುಣವಾಗಿ ಚಿತ್ರದುರ್ಗ ಅಥವಾ ದಾವಣಗೆರೆಯಲ್ಲಿ ಪರೀಕ್ಷೆಯನ್ನು ನಡೆಸಲು ಕ್ರಮಕೈಗೊಳ್ಳಲಾಗುವುದೆಂದು ಮಾನ್ಯ ಕುಲಪತಿಗಳು ಸಭೆಯ ಗಮನಕ್ಕೆ ತಂದರು. |
| ವಿಷಯ–3 | ಪ್ರಸಾರಾಂಗ ಹಾಗೂ ಬಸ್ ತಂಗುದಾಣದ ಕುರಿತು ಕ್ರಮ ಕೈಗೊಂಡ ವರದಿ ನೀಡುವ ಕುರಿತು. |
| ನಿರ್ಣಯ : | ಪ್ರಸಾರಾಂಗಕ್ಕೆ ಸಂಬಂಧಿಸಿದಂತೆ ಶ್ರೀಮತಿ ಶಾರದಾ ಪಾಟೀಲ ಹಾಗೂ ಡಾ. ಜಿ. ಕೆ. ಪ್ರೇಮ, ಮಾನ್ಯ ಸಿಂಡಿಕೇಟ್ ಸದಸ್ಯರು – ಇವರನ್ನೊಳಗೊಂಡಂತೆ ಸಲಹಾ ಸಮಿತಿಯನ್ನು ರಚಿಸಲು ನಿರ್ಣಯಿಸಲಾಯಿತು ಮುಂದುವರೆದು, ಬಸ್ ತಂಗುದಾಣಕ್ಕೆ ಶ್ರೀ ಪ್ರಶಾಂತ್ ಆರ್.ಟಿ. ಮಾನ್ಯ ಸಿಂಡಿಕೇಟ್ ಸದಸ್ಯರು ಇವರು ದಾವಣಗೆರೆಯ ಮಾನ್ಯ ಸಂಸದರಿಗೆ ಮನವಿ ಸಲ್ಲಿಸಿದ್ದು, ಈ ಕುರಿತು ಕ್ರಮವಹಿಸಲಾಗುತ್ತಿರುವುದಾಗಿ ಸಭೆಗೆ ತಿಳಿಸಿದರು. |

ಕುಲಸಚಿವರು

ಕುಲಪತಿಗಳು

| ಪ್ರಾಧಿಕಾರಗಳ ವಿಭಾಗ – 30 | |
|---|---|
| ವಿಷಯ ಸಂಖ್ಯೆ: | ಸಿಂ.01(f)–(01/25) |

# –: ಟಿಪ್ಪಣಿ :–

**ವಿಷಯ:** ಶ್ರೀ ದ್ಯಾಮಪ್ಪ, ಮಾನ್ಯ ಸಿಂಡಿಕೇಟ್ ಸದಸ್ಯರು ಇವರ ಪ್ರಸ್ತಾವನೆ ಕುರಿತು.

*********

ಶ್ರೀ ದ್ಯಾಮಪ್ಪ, ಮಾನ್ಯ ಸಿಂಡಿಕೇಟ್ ಸದಸ್ಯರು – ಇವರು ಈ ಕೆಳಕಂಡಂತೆ ಪ್ರಸ್ತಾವನೆಯನ್ನು ಸಲ್ಲಿಸಿರುತ್ತಾರೆ. ಸದರಿ ವಿಷಯವನ್ನು ದಿನಾಂಕ:21.01.2025 ರಂದು ಏರ್ಪಡಿಸಲಾಗಿರುವ ಸಿಂಡಿಕೇಟ್ ಸಾಮಾನ್ಯ ಸಭೆಯ ಅವಗಾಹನೆಗೆ ಹಾಗೂ ಅನುಮೋದನೆಗಾಗಿ ಮಂಡಿಸಿದೆ.

| | |
|---|---|
| ವಿಷಯ–1 | ವಿಶ್ವವಿದ್ಯಾನಿಲಯದ ಅಧೀನದಲ್ಲಿ ಬರುವ ಸರ್ಕಾರಿ, ಅನುದಾನಿತ ಮತ್ತು ಅನುದಾನ ರಹಿತ ಕಾಲೇಜುಗಳ ವಿದ್ಯಾರ್ಥಿ/ ವಿದ್ಯಾರ್ಥಿನಿಯರು ವಿಶ್ವವಿದ್ಯಾನಿಲಯಕ್ಕೆ ಪಾವತಿಸಿರುವ ಶುಲ್ಕದ ವಿವರ ಎಷ್ಟು ಹಾಗೂ ಈ ಬಾಬ್ತಿನ ಖರ್ಚಿನ ವಿವರ |
| ನಿರ್ಣಯ : | ಸದರಿ ವಿಷಯಕ್ಕೆ ಸಂಬಂಧಿಸಿದಂತೆ ಶೈಕ್ಷಣಿಕ ಮತ್ತು ಹಣಕಾಸು ವಿಭಾಗದಿಂದ ಮಾಹಿತಿ ಮಾಹಿತಿ ಪಡೆದು ನೀಡುವಂತೆ ಮಾನ್ಯ ಕುಲಪತಿಗಳು ಕುಲಸಚಿವರಿಗೆ(ಆಡಳಿತ) ಸೂಚಿಸಿದರು. |
| ವಿಷಯ–2 | ವಿದ್ಯಾರ್ಥಿಗಳಿಗೆ ಪರೀಕ್ಷಾ ಶುಲ್ಕ ಪಾವತಿಸುವ ಸಮಯದಲ್ಲಿ ವಿದ್ಯಾರ್ಥಿಗಳು ಅವರ ಲಾಗಿನ್‌ನಲ್ಲಿ ಲಾಗಿನ್ ಆದಾಗ ABC ID ಮಾಡಿಕೊಳ್ಳಲು ಆನ್‌ಲೈನ್‌ನಲ್ಲಿ ತೋರಿಸುತ್ತದೆ. ಆದರೆ, ಇದರ ಬಗ್ಗೆ ವಿಶ್ವವಿದ್ಯಾನಿಲಯದಿಂದ ಕಾಲೇಜುಗಳಿಗೆ ಹಾಗೂ ವಿದ್ಯಾರ್ಥಿಗಳಿಗೆ ಯಾವುದೇ ಮಾಹಿತಿ ನೀಡದೇ ತೊಂದರೆಯಾಗಿರುತ್ತದೆ. ಇದರ ಬಗ್ಗೆ ಸೂಕ್ತ ಮಾಹಿತಿಯನ್ನು ನೀಡಿದ ನಂತರ ಪರೀಕ್ಷಾ ಶುಲ್ಕದ ಅಧಿಸೂಚನೆ ಹೊರಡಿಸುವ ಕುರಿತು. |
| ನಿರ್ಣಯ : | ಸದರಿ ವಿಷಯಕ್ಕೆ ಸಂಬಂಧಿಸಿದಂತೆ ಕುಲಸಚಿವರು (ಪರೀಕ್ಷಾಂಗ) ಇವರು ಸವಿವರ ಮಾಹಿತಿಯನ್ನು ಸಭೆಗೆ ತಿಳಿಸಿದರು. |
| ವಿಷಯ–3 | ಎಸ್.ಎಸ್.ಪಿ. ಪೋರ್ಟಲ್‌ನಲ್ಲಿ ವಿದ್ಯಾರ್ಥಿಗಳು ವಿದ್ಯಾರ್ಥಿ ವೇತನಕ್ಕೆ ಅರ್ಜಿಯನ್ನು ಸಲ್ಲಿಸುವಾಗ ಹಲವಾರು ತೊಂದರೆ ಅನುಭವಿಸುತ್ತಾರೆ. ಇದರ ಬಗ್ಗೆ ಎಸ್.ಎಸ್.ಪಿ. ವಿದ್ಯಾರ್ಥಿ ವೇತನದ ವ್ಯಾಟ್ಸಪ್ ಗ್ರೂಪ್ ಮಾಡಿದ್ದರೂ ಹಲವು ಕಾಲೇಜಿನವರು ವಿದ್ಯಾರ್ಥಿ ವೇತನ ಅರ್ಜಿ ಸಲ್ಲಿಸುವಾಗ ಆಗಿರುವ ತೊಂದರೆಯನ್ನು ಗ್ರೂಪ್‌ನಲ್ಲಿ ಹಾಕಿದ್ದರೂ ಆಗಿರುವ ತೊಂದರೆಯನ್ನು ಸೂಕ್ತ ಸಮಯದಲ್ಲಿ ಪರಿಹಾರ ಮಾಡಿರುವುದಿಲ್ಲ. ಇದರ ಬಗ್ಗೆ ಗಮನ ಹರಿಸಿ ಸೂಕ್ತ ಕ್ರಮ ಕೈಗೊಳ್ಳುವ ಕುರಿತು. |
| ನಿರ್ಣಯ : | ಸದರಿ ವಿಷಯಕ್ಕೆ ಸಂಬಂಧಿಸಿದಂತೆ ಕ್ರಮವಹಿಸಲಾಗುವುದೆಂದು ಮಾನ್ಯ ಕುಲಪತಿಗಳು ಸಭೆಯ ಗಮನಕ್ಕೆ ತಂದರು. |
| ವಿಷಯ–4 | ಸಂಯೋಜನೆ ಶುಲ್ಕ ಬಗ್ಗೆ ಹಾಗೂ ಪರೀಕ್ಷಾ ಶುಲ್ಕ ಪಾವತಿಸುವ ಸಮಯದಲ್ಲಿ ಭಾನುವಾರಗಳು ಹಾಗೂ ಸರ್ಕಾರಿ ರಜೆ ದಿನಗಳು ಬರುವ ಹಿಂದೆ ಹಾಗೂ ಮುಂದೆ ಕೊನೆಯ ದಿನಾಂಕಗಳನ್ನು ಪರಿಶೀಲಿಸಿ ಕ್ರಮಕೈಗೊಳ್ಳುವ ಕುರಿತು. |
| ನಿರ್ಣಯ : | ಸದರಿ ವಿಷಯಕ್ಕೆ ಸಂಬಂಧಿಸಿದಂತೆ ಕ್ರಮವಹಿಸಲಾಗುವುದೆಂದು ಮಾನ್ಯ ಕುಲಪತಿಗಳು ಸಭೆಯ ಗಮನಕ್ಕೆ ತಂದರು. |
| ವಿಷಯ–5 | ಪರೀಕ್ಷಾ ವಿಭಾಗಕ್ಕೆ ಸಂದಾಯವಾಗುವ ಶುಲ್ಕದ ವಿವರ ಮತ್ತು ಖರ್ಚು ವೆಚ್ಚ ದಾಖಲೆ ಕುರಿತು. |
| ನಿರ್ಣಯ : | ಸದರಿ ವಿಷಯಕ್ಕೆ ಸಂಬಂಧಿಸಿದಂತೆ ಪರೀಕ್ಷಾಂಗ ವಿಭಾಗದಿಂದ ಮಾಹಿತಿ ನೀಡುವಂತೆ ಮಾನ್ಯ ಕುಲಪತಿಗಳು ಕುಲಸಚಿವರಿಗೆ(ಪರೀಕ್ಷಾಂಗ) ಸೂಚಿಸಿದರು. |

ಕುಲಸಚಿವರು

ಕುಲಪತಿಗಳು

| ಪ್ರಾಧಿಕಾರಗಳ ವಿಭಾಗ – 31 | |
|---|---|
| ವಿಷಯ ಸಂಖ್ಯೆ: | ಸಿಂ.01(g)–(01/25) |

## –ಃ ಟಿಪ್ಪಣಿ ಃ–

ವಿಷಯಃ ಶ್ರೀ ಶಬೀರ್ ಅಲಿಖಾನ್, ಮಾನ್ಯ ಸಿಂಡಿಕೇಟ್ ಸದಸ್ಯರು ಇವರ ಪ್ರಸ್ತಾವನೆ ಕುರಿತು.

*********

ಶ್ರೀ ಶಬೀರ್ ಅಲಿಖಾನ್, ಮಾನ್ಯ ಸಿಂಡಿಕೇಟ್ ಸದಸ್ಯರು – ಇವರು ಈ ಕೆಳಕಂಡಂತೆ ಪ್ರಸ್ತಾವನೆಯನ್ನು ಸಲ್ಲಿಸಿರುತ್ತಾರೆ. ಸದರಿ ವಿಷಯವನ್ನು ದಿನಾಂಕ:21.01.2025 ರಂದು ಏರ್ಪಡಿಸಲಾಗಿರುವ ಸಿಂಡಿಕೇಟ್ ಸಾಮಾನ್ಯ ಸಭೆಯ ಅವಗಾಹನೆಗೆ ಹಾಗೂ ಅನುಮೋದನೆಗಾಗಿ ಮಂಡಿಸಿದೆ.

| | |
|---|---|
| ವಿಷಯ–1 | ದಾವಣಗೆರೆ ವಿಶ್ವವಿದ್ಯಾನಿಲಯದ ಉರ್ದು ವಿಭಾಗದಲ್ಲಿ ನುರಿತ ಪ್ರಾಧ್ಯಾಪಕರನ್ನು ನೇಮಿಸಿ ಮತ್ತು ಸಂಯೋಜಿತ ಕಾಲೇಜುಗಳಲ್ಲಿ ಕೆಲಸ ಮಾಡುತ್ತಿರುವ ಉಪನ್ಯಾಸಕರನ್ನು ಬಳಸಿ ಉರ್ದು ಅಧ್ಯಯನ ಕೇಂದ್ರದ ಸಲಹಾ ಸಮಿತಿ ರಚಿಸುವ ಬಗ್ಗೆ. |
| ನಿರ್ಣಯ : | ಉರ್ದು ಅಧ್ಯಯನ ಕೇಂದ್ರದ ಸಲಹಾ ಸಮಿತಿಯನ್ನು ರಚಿಸಲು ಸಭೆಯು ಒಮ್ಮತದಿಂದ ಅನುಮೋದಿಸಿತು. |
| ವಿಷಯ–2 | ದಾವಣಗೆರೆ ವಿಶ್ವವಿದ್ಯಾನಿಲಯದ ವಿವಿಧ ಪರೀಕ್ಷಾ ಕಾರ್ಯಗಳ ಸಂಭಾವನೆ/ ಭತ್ಯೆಗಳನ್ನು ಪರಿಷ್ಕರಿಸುವ ಕುರಿತು. |
| ನಿರ್ಣಯ : | ಮುಂದಿನ ದಿನಗಳಲ್ಲಿ ನಿಯಮಾನುಸಾರ ಪರಿಶೀಲಿಸಿ ಕ್ರಮವಹಿಸಲಾಗುವುದೆಂದು ಮಾನ್ಯ ಕುಲಪತಿಗಳು ಸಭೆಯ ಗಮನಕ್ಕೆ ತಂದರು. |
| ವಿಷಯ–3 | ವಿಶ್ವವಿದ್ಯಾನಿಲಯದ ಉತ್ತರ ಪತ್ರಿಕೆಗಳನ್ನು ಹಲವಾರು ವಿಶ್ವವಿದ್ಯಾನಿಲಯದಲ್ಲಿರುವಂತೆ ಡಿಜಿಟಲ್ ಮೌಲ್ಯಮಾಪನ ಮಾಡಿಸುವ ಕುರಿತು. |
| ನಿರ್ಣಯ : | ಮುಂದಿನ ದಿನಗಳಲ್ಲಿ ಕ್ರಮವಹಿಸಲಾಗುವುದೆಂದು ಮಾನ್ಯ ಕುಲಪತಿಗಳು ಸಭೆಯ ಗಮನಕ್ಕೆ ತಂದರು. |

ಕುಲಸಚಿವರು

ಕುಲಪತಿಗಳು

| ಪ್ರಾಧಿಕಾರಗಳ ವಿಭಾಗ – 32 | |
|---|---|
| ವಿಷಯ ಸಂಖ್ಯೆ: | ಸಿಂ.01(h)–(01/25) |

## –ಃ ಟಿಪ್ಪಣಿ ಃ–

**ವಿಷಯಃ ಶ್ರೀ ತಿಪ್ಪೇಸ್ವಾಮಿ ಹೆಚ್, ಮಾನ್ಯ ಸಿಂಡಿಕೇಟ್ ಸದಸ್ಯರು ಇವರ ಪ್ರಸ್ತಾವನೆ ಕುರಿತು.**

*********

ಶ್ರೀ ತಿಪ್ಪೇಸ್ವಾಮಿ ಹೆಚ್, ಮಾನ್ಯ ಸಿಂಡಿಕೇಟ್ ಸದಸ್ಯರು – ಇವರು ಈ ಕೆಳಕಂಡಂತೆ ಪ್ರಸ್ತಾವನೆಯನ್ನು ಸಲ್ಲಿಸಿರುತ್ತಾರೆ. ಸದರಿ ವಿಷಯವನ್ನು ದಿನಾಂಕ:21.01.2025 ರಂದು ಏರ್ಪಡಿಸಲಾಗಿರುವ ಸಿಂಡಿಕೇಟ್ ಸಾಮಾನ್ಯ ಸಭೆಯ ಅವಗಾಹನೆಗೆ ಹಾಗೂ ಅನುಮೋದನೆಗಾಗಿ ಮಂಡಿಸಿದೆ.

| | |
|---|---|
| **ವಿಷಯ :** | 1. ಕ್ರೀಡಾ ನೀತಿ ರಚಿಸುವ ಬಗ್ಗೆ ಉಪಸಮಿತಿಯನ್ನು ರಚಿಸುವ ಕುರಿತು.<br>2. ದಾವಣಗೆರೆ ವಿಶ್ವವಿದ್ಯಾನಿಲಯದಲ್ಲಿ ನಡೆಯುತ್ತಿರುವ ಎಂ.ಪಿ.ಇಡಿ ವಿಭಾಗಕ್ಕೆ ಎನ್.ಸಿ.ಟಿ.ಇ. ವತಿಯಿಂದ ಮಾನ್ಯತೆ ಪಡೆಯಲು ಕ್ರಮಕೈಗೊಳ್ಳುವ ಬಗ್ಗೆ ಹಾಗೂ ಎಂ.ಪಿ.ಇ.ಡಿ. ವಿಭಾಗದಲ್ಲಿ ನಡೆಯುವ ನ್ಯೂನತೆಗಳನ್ನು ಸರಿಪಡಿಸಲು ಕ್ರಮಕೈಗೊಳ್ಳುವ ಕುರಿತು.<br>3. ದಾವಣಗೆರೆ ವಿಶ್ವವಿದ್ಯಾನಿಲಯದ ವ್ಯಾಪ್ತಿಯಲ್ಲಿ ನಡೆಸುವ ಅಂತರ ಕಾಲೇಜು ಕ್ರೀಡಾಕೂಟಗಳಿಗೆ ಹಾಗೂ ಅಂತರ ವಿಶ್ವವಿದ್ಯಾನಿಲಯದಲ್ಲಿ ಭಾಗವಹಿಸುವ ಕ್ರೀಡಾಪಟುಗಳಿಗೆ ಹಾಗೂ ವ್ಯವಸ್ಥಾಪಕರಿಗೆ ಮತ್ತು ತರಬೇತಿದಾರರಿಗೆ ದಿನಭತ್ಯೆ ಹೆಚ್ಚಿಸುವ ಮತ್ತು ಮೂಲಭೂತ ಸೌಕರ್ಯಗಳನ್ನು ಒದಗಿಸುವ ಕುರಿತು.<br>4. ದಾವಣಗೆರೆ ವಿಶ್ವವಿದ್ಯಾನಿಲಯದ ವ್ಯಾಪ್ತಿಯಲ್ಲಿ ನಡೆಸುವ ಅಂತರ ಕಾಲೇಜು ಕ್ರೀಡಾಕೂಟಗಳಿಗೆ ಹಾಗೂ ಅಂತರ ವಿಶ್ವವಿದ್ಯಾನಿಲಯದಲ್ಲಿ ಭಾಗವಹಿಸುವ ಕ್ರೀಡಾಪಟುಗಳಿಗೆ ಹಾಗೂ ವ್ಯವಸ್ಥಾಪಕರಿಗೆ ಮತ್ತು ತರಬೇತಿದಾರರಿಗೆ ದಿನಭತ್ಯೆ ಹೆಚ್ಚಿಸುವ ಮತ್ತು ಮೂಲಭೂತ ಸೌಕರ್ಯಗಳನ್ನು ಒದಗಿಸುವ ಕುರಿತು |
| ನಿರ್ಣಯ : | ಈ ಮೇಲ್ಕಂಡ ನಾಲ್ಕು ಅಂಶಗಳಿಗೆ ಸಂಬಂಧಿಸಿದಂತೆ ಶ್ರೀ ತಿಪ್ಪೇಸ್ವಾಮಿ ಹೆಚ್, ಮಾನ್ಯ ಸಿಂಡಿಕೇಟ್ ಸದಸ್ಯರನ್ನೊಳಗೊಂಡಂತೆ Sports Advisory Committee ಯನ್ನು ರಚಿಸಲು ಹಾಗೂ ಸಭೆಯಲ್ಲಿ ತೀರ್ಮಾನ ಕೈಗೊಳ್ಳಲು ಸಭೆಯು ಒಮ್ಮತದಿಂದ ನಿರ್ಣಯಿಸಿತು. |

ಕುಲಸಚಿವರು

ಕುಲಪತಿಗಳು

| ಪ್ರಾಧಿಕಾರಗಳ ವಿಭಾಗ – 33 | |
| --- | --- |
| ವಿಷಯ ಸಂಖ್ಯೆ: | ಸಿಂ.01(i)–(01/25) |

## –ಃ ಟಿಪ್ಪಣಿ ಃ–

**ವಿಷಯಃ ಡಾ. ಪ್ರಶಾಂತ ಎನ್.ಸಿ, ಮಾನ್ಯ ಸಿಂಡಿಕೇಟ್ ಸದಸ್ಯರು ಇವರ ಪ್ರಸ್ತಾವನೆ ಕುರಿತು.**

*********

ಡಾ. ಪ್ರಶಾಂತ ಎನ್.ಸಿ, ಮಾನ್ಯ ಸಿಂಡಿಕೇಟ್ ಸದಸ್ಯರು – ಇವರು ಈ ಕೆಳಕಂಡಂತೆ ಪ್ರಸ್ತಾವನೆಯನ್ನು ಸಲ್ಲಿಸಿರುತ್ತಾರೆ. ಸದರಿ ವಿಷಯವನ್ನು ದಿನಾಂಕ:21.01.2025 ರಂದು ಏರ್ಪಡಿಸಲಾಗಿರುವ ಸಿಂಡಿಕೇಟ್ ಸಾಮಾನ್ಯ ಸಭೆಯ ಅವಗಾಹನೆಗೆ ಹಾಗೂ ಅನುಮೋದನೆಗಾಗಿ ಮಂಡಿಸಿದೆ.

| | |
| --- | --- |
| ವಿಷಯ–1 | ದಾವಣಗೆರೆ ವಿಶ್ವವಿದ್ಯಾನಿಲಯದ ಎಲ್ಲಾ ವಿಭಾಗಗಳಲ್ಲಿ ಹೊರಗುತ್ತಿಗೆಯಾಗಿ ಕಾರ್ಯನಿರ್ವಹಿಸುತ್ತಿರುವ ಬೋಧಕೇತರ ಸಿಬ್ಬಂದಿಯ ಮಾಹಿತಿ ಹಾಗೂ ಹೊರಗುತ್ತಿಗೆ ಸಂಬಂಧಿಸಿದಂತೆ ನೀಡಿರುವ ದಾಖಲೆಗಳ ವಿವರ. |
| ನಿರ್ಣಯ : | ಸದರಿ ವಿಷಯಕ್ಕೆ ಸಂಬಂಧಿಸಿದಂತೆ ಮಾ.ಸ.ನಿ. ವಿಭಾಗದಿಂದ ಮಾಹಿತಿ ನೀಡುವಂತೆ ಮಾನ್ಯ ಕುಲಪತಿಗಳು ಕುಲಸಚಿವರಿಗೆ(ಆಡಳಿತ) ಸೂಚಿಸಿದರು |
| ವಿಷಯ–2 | ವಾರ್ಷಿಕವಾಗಿ ಪ್ರತಿ ಯು.ಜಿ. ಮತ್ತು ಪಿ.ಜಿ. ಕಾಲೇಜುಗಳಿಂದ ಸಂಗ್ರಹಿಸುವ ಸಂಯೋಜನಾ ಶುಲ್ಕದ ವಿವರ ಹಾಗೂ ಸಂಗ್ರಹಿಸಿದ ಶುಲ್ಕವನ್ನು ಯಾವ ಯಾವ ಬಾಬ್ತುಗಳಿಗೆ ಖರ್ಚು ಮಾಡಿದ/ ಮಾಡುವ ವಿವರ. |
| ನಿರ್ಣಯ : | ಸದರಿ ವಿಷಯಕ್ಕೆ ಸಂಬಂಧಿಸಿದ ಸಂಪೂರ್ಣ ಮಾಹಿತಿಯನ್ನು ಮಾನ್ಯ ಕುಲಪತಿಗಳು ಸಭೆಯ ಗಮನಕ್ಕೆ ತಂದರು. |
| ವಿಷಯ–3 | ದಾವಣಗೆರೆ ವಿಶ್ವವಿದ್ಯಾನಿಲಯದ ಆವರಣದಲ್ಲಿ ನಡೆಯುತ್ತಿರುವ ಎಲ್ಲಾ ರೀತಿಯ ಕಾಮಗಾರಿಗಳ ಪ್ರಸ್ತುತ ಸ್ಥಿತಿಗತಿ, ಇದಕ್ಕೆ ಈಗಾಗಲೇ ತಗುಲಿರುವ ವೆಚ್ಚ ಹಾಗೂ ಕಾಮಗಾರಿಯನ್ನು ನಿರ್ವಹಿಸಲು ಕೊಟ್ಟಿರುವ ಕಂಟ್ರಾಕ್ಟರ್ ಮತ್ತು ಪ್ರತಿ ಕಾಮಗಾರಿಗೆ ನಿಗದಿಪಡಿಸಿದ ಮೊತ್ತದ ಮಾಹಿತಿ. |
| ನಿರ್ಣಯ : | ಸದರಿ ವಿಷಯಕ್ಕೆ ಸಂಬಂಧಿಸಿದಂತೆ ಇಂಜಿನಿಯರಿಂಗ್ ವಿಭಾಗದಿಂದ ಮಾಹಿತಿ ನೀಡುವಂತೆ ಮಾನ್ಯ ಕುಲಪತಿಗಳು ಕುಲಸಚಿವರಿಗೆ (ಆಡಳಿತ) ಸೂಚಿಸಿದರು. |

ಕುಲಸಚಿವರು

ಕುಲಪತಿಗಳು

| ಪ್ರಾಧಿಕಾರಗಳ ವಿಭಾಗ – 34 | |
|---|---|
| ವಿಷಯ ಸಂಖ್ಯೆ: | ಸಿಂ.01(j)–(01/25) |

## –ಃ ಟಿಪ್ಪಣಿ ಃ–

**ವಿಷಯಃ ಡಾ. ಪ್ರೇಮ ಜಿ.ಕೆ, ಮಾನ್ಯ ಸಿಂಡಿಕೇಟ್ ಸದಸ್ಯರು ಇವರ ಪ್ರಸ್ತಾವನೆ ಕುರಿತು.**

*********

ಡಾ. ಪ್ರೇಮ ಜಿ.ಕೆ, ಮಾನ್ಯ ಸಿಂಡಿಕೇಟ್ ಸದಸ್ಯರು – ಇವರು ಈ ಕೆಳಕಂಡಂತೆ ಪ್ರಸ್ತಾವನೆಯನ್ನು ಸಲ್ಲಿಸಿರುತ್ತಾರೆ. ಸದರಿ ವಿಷಯವನ್ನು ದಿನಾಂಕ:21.01.2025 ರಂದು ಏರ್ಪಡಿಸಲಾಗಿರುವ ಸಿಂಡಿಕೇಟ್ ಸಾಮಾನ್ಯ ಸಭೆಯ ಅವಗಾಹನೆಗೆ ಹಾಗೂ ಅನುಮೋದನೆಗಾಗಿ ಮಂಡಿಸಿದೆ.

| | |
|---|---|
| ವಿಷಯ–1 | 5 ವರ್ಷದಿಂದ ಇಲ್ಲಿಯವರೆಗೆ (ವಿ.ವಿ. ಆರಂಭದಿಂದ) ಪಿ.ಹೆಚ್.ಡಿ. ಸೀಟು ಹಂಚಿಕೆಯ ವಿಧಾನ ಮತ್ತು ಆಯ್ಕೆಯಾದ ಅಭ್ಯರ್ಥಿಯ ಕ್ಯಾಟಗರಿ ಮತ್ತು ಆಯಾ ವರ್ಷದ ಸಂಪೂರ್ಣ ಅಭ್ಯರ್ಥಿಗಳ ಪಟ್ಟಿ ವಿಷಯ/ ವಿಭಾಗವಾರು ವಿವರಣೆ. |
| ನಿರ್ಣಯ : | ಸದರಿ ವಿಷಯಕ್ಕೆ ಸಂಬಂಧಿಸಿದಂತೆ, ಪಿಹೆಚ್.ಡಿ ವಿಭಾಗದಿಂದ ಮಾಹಿತಿ ನೀಡುವಂತೆ ಮಾನ್ಯ ಕುಲಪತಿಗಳು ಕುಲಸಚಿವರಿಗೆ (ಆಡಳಿತ) ಸೂಚಿಸಿದರು. |
| ವಿಷಯ–2 | 2023–24–25 ಪದವಿ ಮತ್ತು ಸ್ನಾತಕೋತ್ತರ ಪದವಿ ವಿದ್ಯಾರ್ಥಿಗಳಿಗೆ ವಿಧಿಸಿದ ಫೀ ಮತ್ತು ಫೈನ್ ವಿವರಗಳ ಕುರಿತು. |
| ನಿರ್ಣಯ : | ಸದರಿ ವಿಷಯಕ್ಕೆ ಸಂಬಂಧಿಸಿದಂತೆ, ಪರೀಕ್ಷಾಂಗ ಮತ್ತು ಶೈಕ್ಷಣಿಕ ವಿಭಾಗದಿಂದ ಮಾಹಿತಿ ನೀಡುವಂತೆ ಮಾನ್ಯ ಕುಲಪತಿಗಳು – ಕುಲಸಚಿವರು (ಆಡಳಿತ) ಮತ್ತು ಕುಲಸಚಿವರು (ಪರೀಕ್ಷಾಂಗ) ಇವರಿಗೆ ಸೂಚಿಸಿದರು. |
| ವಿಷಯ–3 | ಪಠ್ಯೇತರ ಚಟುವಟಿಕೆ, ಪ್ರತಿ ವರ್ಷ ನಡೆಸಿದ ಕಾರ್ಯಕ್ರಮಗಳ ವಿವರ, ಭಾಗವಹಿಸಿದ ವಿದ್ಯಾರ್ಥಿಗಳ ಸಂಖ್ಯೆ, ಕಾಲೇಜುಗಳಿಂದ ಸಂಗ್ರಹಿಸಿದ ಹಣ ಮತ್ತು ಖರ್ಚಾದ ಹಣ ಕುರಿತು. |
| ನಿರ್ಣಯ : | ಸದರಿ ವಿಷಯಕ್ಕೆ ಸಂಬಂಧಿಸಿದಂತೆ ಪ್ರತಿ ವರ್ಷ ವಿಶ್ವವಿದ್ಯಾನಿಲಯದಲ್ಲಿ ಪಠ್ಯೇತರ ಚಟುವಟಿಕೆ ಕಾರ್ಯಕ್ರಮಗಳನ್ನು ಆಯೋಜನೆ ಮಾಡಿರುವುದಾಗಿ ಮಾನ್ಯ ಕುಲಪತಿಗಳು ವಿವರಣೆಯನ್ನು ಸಭೆಯ ಗಮನಕ್ಕೆ ತಂದರು. |
| ವಿಷಯ–4 | ಅತಿಥಿ ಉಪನ್ಯಾಸಕರ ಕುಂದುಕೊರತೆಗಳ ಕುರಿತು. |
| ನಿರ್ಣಯ : | ಮಾರ್ಚ್–2025ರ ಮಾಹೆಯಲ್ಲಿ ಅತಿಥಿ ಉಪನ್ಯಾಸಕರ ವೇತನಕ್ಕೆ ಸಂಬಂಧಿಸಿದಂತೆ ಸಿಂಡಿಕೇಟ್ ಸದಸ್ಯರನ್ನೊಳಗೊಂಡಂತೆ ಉಪಸಮಿತಿಯನ್ನು ರಚಿಸಿ ಸಭೆಯ ನಿರ್ಣಯದನುಸಾರ ಕ್ರಮಕೈಗೊಳ್ಳಲು ಸಭೆಯು ನಿರ್ಣಯಿಸಿತು. |

ಕೊನೆಯಲ್ಲಿ ಕುಲಸಚಿವರು (ಆಡಳಿತ) ಇವರ ವಂದನಾರ್ಪಣೆಯೊಂದಿಗೆ ಸಭೆಯು ಮುಕ್ತಾಯಗೊಂಡಿತು.

ಕುಲಸಚಿವರು

ಕುಲಪತಿಗಳು